ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	501(591)
ಸದಸ್ಯರ ಹೆಸರು	:	ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	:	10-03-2020
ಉತ್ತರಿಸುವ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ ಎಷ್ಟು ಇಂದಿರಾ ಕ್ಯಾಂಟೀನ್‌ಗಳು ಕಾರ್ಯನಿರ್ವಹಿಸುತ್ತಿದೆ; ದಿನವೊಂದಕ್ಕೆ ಎಷ್ಟು ಮಂದಿ ಉಪಹಾರವನ್ನು ಸೇವಿಸುತ್ತಿದ್ದಾರೆ; (ವಿವರ ನೀಡುವುದು)	ರಾಜ್ಯದ 30 ಜಿಲ್ಲೆಗಳಲ್ಲಿ 110 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ 175 ಇಂದಿರಾ ಕ್ಯಾಂಟೀನ್‌ಗಳು ಚಾಲ್ತಿಯಲ್ಲಿರುತ್ತದೆ. (ಚಾಲ್ತಿಯಲ್ಲಿರುವ ಇಂದಿರಾ ಕ್ಯಾಂಟೀನ್‌ಗಳ ವಿವರವನ್ನು ಅನುಬಂಧ-1 ರಲ್ಲಿ ಲಗತ್ತಿಸಿ ಸಲ್ಲಿಸಿದೆ) ದಿನವೊಂದಕ್ಕೆ ಎಲ್ಲಾ ಇಂದಿರಾ ಕ್ಯಾಂಟೀನ್‌ಗಳಲ್ಲಿ ಉಪಹಾರ ಸೇವಿಸಿರುವ ಜನರ ಸಂಖ್ಯೆ–ಅಂದಾಜು75,166
(ಆ)	ರಾಜ್ಯದಲ್ಲಿ ಇಂದಿರಾ ಕ್ಯಾಂಟೀನ್ ಆಹಾರದ ಗುಣಮಟ್ಟವನ್ನು ಪರಿಶೀಲಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)	• ಸರ್ಕಾರವು ನಅಇ 301 ಎಸ್‌ಎಫ್‌ಸಿ 2017 ದಿ: 23-0-2017ರ ಆದೇಶದನ್ವಯ ಜಿಲ್ಲೆಗಳಲ್ಲಿ ಕ್ಯಾಂಟೀನ್‌ಗಳ ಅನುಷ್ಠಾನ ಮತ್ತು ನಂತರದ ಮೇಲ್ವಿಚಾರಣೆ ನಡೆಸಲು ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿ ರಚಿಸಿ ಆದೇಶಿಸಿರುತ್ತದೆ. • ಪೌರಾಡಳಿತ ನಿರ್ದೇಶನಾಲಯದ ಪತ್ರ ಸಂಖ್ಯೆ: 23978 ಡಿಎಂಎ66 ಟಿಎಂಐಎಸ್‌ಸಿ 2017-18 ದಿ: 07-04-2018 ರನ್ವಯ ಆಹಾರ ಸರಬರಾಜುದಾರರು ಇಂದಿರಾ ಕ್ಯಾಂಟೀನ್‌ಗಳಲ್ಲಿ ಪ್ರತಿ ಹೊತ್ತು ಸಿದ್ಧಪಡಿಸುವ ಆಹಾರದ ಪ್ರಮಾಣವನ್ನು ಸ್ಥಳೀಯ ಸಂಸ್ಥೆಗಳ ಪರಿಸರ ಅಭಿಯಂತರರು/ ಆರೋಗ್ಯ ನಿರೀಕ್ಷಕರು ಪ್ರತಿ ಹೊತ್ತು ಕಡ್ಡಾಯವಾಗಿ ಭೇಟಿ ನೀಡಿ ನೀಡಲಾಗಿರುವ ತೂಕದ ಯಂತ್ರದ ಮುಖೇನ ಆಹಾರ ಪ್ರಮಾಣವನ್ನು ಪರಿಶೀಲಿಸಿ ನಮೂದಿಸಲು ನಿರ್ದೇಶಿಸಲಾಗಿರುತ್ತದೆ. • ಪೌರಾಡಳಿತ ನಿರ್ದೇಶನಾಲಯದ ಪತ್ರ ಸಂಖ್ಯೆ: 21878 ಡಿಎಂಎ 23 ಎಂಐಎಸ್‌ಸಿ 2017-18 ದಿ: 20-06-2019ರನ್ವಯ ಇಂದಿರಾ ಕ್ಯಾಂಟೀನ್ ಯೋಜನೆಗೆ ಸಂಬಂಧಿಸಿದಂತೆ ಹಲವು ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಈ ಪೈಕಿ ಮಹಾನಗರ ಪಾಲಿಕೆಗಳ ಜಂಟಿ ಆಯುಕ್ತರು/ ಉಪ ಆಯುಕ್ತರು, ಪೌರಾಯುಕ್ತರು/ ಮುಖ್ಯಾಧಿಕಾರಿರವರು ಸ್ಥಳೀಯ ಸಂಸ್ಥೆ ವ್ಯಾಪ್ತಿಯಲ್ಲಿರುವ ಇಂದಿರಾ ಕ್ಯಾಂಟೀನ್‌ಗಳಿಗೆ ಕಡ್ಡಾಯವಾಗಿ ಕನಿಷ್ಠ 15 ದಿನಗಳಿಗೊಮ್ಮೆ ಭೇಟಿ ನೀಡಿ ಗುಣಮಟ್ಟ, ರುಚಿ, ಸಂಪ್ ಹಾಗೂ ಓವರ್‌ಹೆಡ್ ಟ್ಯಾಂಕ್ ಸ್ವಚ್ಛತೆ ನಿರ್ವಹಣೆ, ಉಪಕರಣಗಳ ಬಳಕೆ ಇತ್ಯಾದಿಗಳನ್ನು ಪರಿಶೀಲಿಸಲು ನಿರ್ದೇಶಿಸಲಾಗಿರುತ್ತದೆ. ಪೌರಾಡಳಿತ ನಿರ್ದೇಶನಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಅಭಿಯಂತರರನ್ನು ಸ್ಥಳೀಯ ಸಂಸ್ಥೆಗಳಲ್ಲಿರುವ ಕ್ಯಾಂಟೀನ್‌ಗಳಿಗೆ ಭೇಟಿ ನೀಡಿ ಶುಚಿತ್ವ, ರುಚಿ, ಆಹಾರದ ಗುಣಮಟ್ಟ ಇತ್ಯಾದಿಗಳನ್ನು ಪರಿಶೀಲಿಸಿ ವರದಿಯನ್ನು ಪೌರಾಡಳಿತ ನಿರ್ದೇಶನಾಲಯಕ್ಕೆ ಸಲ್ಲಿಸಲು ಕಛೇರಿ ಆದೇಶ ಸಂಖ್ಯೆ: 23574 ಡಿಎಂ 60 ಎಂಐಎಸ್‌ಸಿ 2017-18 ದಿ: 04-07-2019ರನ್ವಯ ಆದೇಶಿಸಲಾಗಿ ವರದಿಯನ್ನು ಸಲ್ಲಿಸಿರುತ್ತಾರೆ.

(ಇ)	ಮಂಗಳೂರು ನಗರದಲ್ಲಿ ಎಷ್ಟು ಇಂದಿರಾ ಕ್ಯಾಂಟೀನ್‌ಗಳು ಕಾರ್ಯನಿರ್ವಹಿಸುತ್ತಿದೆ; ಎಷ್ಟು ಮಂದಿ ಉಪಹಾರ ಸೇವಿಸುತ್ತಾರೆ; (ವಿವರ ನೀಡುವುದು)	ಮಂಗಳೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ 05 ಕ್ಯಾಂಟೀನ್ ಹಾಗೂ ಉಳ್ಳಾಲ ನಗರಸಭೆ ವ್ಯಾಪ್ತಿಯಲ್ಲಿ 01 ಕ್ಯಾಂಟೀನ್ ಕಾರ್ಯನಿರ್ವಹಿಸುತ್ತಿದೆ. ಮಂಗಳೂರು ನಗರದಲ್ಲಿ ಪ್ರತಿ ಹೊತ್ತಿಗೆ ಅಂದಾಜು 6,256 ಮಂದಿ ಕ್ಯಾಂಟೀನ್‌ಗಳಲ್ಲಿ ಉಪಹಾರ ಸೇವಿಸುತ್ತಿರುತ್ತಾರೆ.
(ಈ)	ಇಂದಿರಾ ಕ್ಯಾಂಟೀನ್‌ನಲ್ಲಿ ಕಾಫಿ/ಟೀ ನೀಡಬೇಕೆಂಬ ಬೇಡಿಕೆ ಇದ್ದು; ಎಷ್ಟು ಕಡೆ ಪೂರೈಸಲಾಗುತ್ತದೆ; (ವಿವರ ನೀಡುವುದು)	ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿರುವ ಇಂದಿರಾ ಕ್ಯಾಂಟೀನ್‌ಗಳಲ್ಲಿ ಕಾಫಿ / ಟೀ ನ್ನು ಪೂರೈಕೆ ಮಾಡುತ್ತಿಲ್ಲ.

ಕಡತ ಸಂಖ್ಯೆ: ನಅಇ 80 ಎಸ್.ಎಫ್.ಸಿ 2020

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು.

ಇಂದಿರಾ ಕ್ಯಾಂಟೀನ್‌ಗಳ ಆಹಾರ ಸರಬರಾಜು ಬಿಲ್ಲಿನ ಪ್ರಕ್ರಿಯೆ

1. ಪೂರ್ವಭಾವಿ

1.1 ಗುತ್ತಿಗೆದಾರರು ನಿರ್ವಹಿಸುವ ಪ್ರತಿಯೊಂದು ಅಡುಗೆ ಮನೆಯನ್ನು ಪ್ರತ್ಯೇಕ ಸಂಕೇತ ಸಂಖ್ಯೆಯ ಮೂಲಕ ಗುರುತಿಸುವುದು.

1.2 ಪ್ರತಿ ಕ್ಯಾಂಟೀನನ್ನು ನಿಗಧಿಪಡಿಸಿದ ಅಡುಗೆ ಮನೆಯೊಂದಿಗೆ ಸಂಯೋಜಿಸಲಾಗುವುದು/ ಜೋಡಿಸಲಾಗುವುದು. ಪ್ರತಿ ಕ್ಯಾಂಟೀನ್ ತನ್ನದೇ ಆದ ಸಂಕೇತ ಸಂಖ್ಯೆಯನ್ನು ಹೊಂದಿರುತ್ತದೆ. ಸದರಿ ಸಂಖ್ಯೆಯ ಪೂರ್ವದಲ್ಲಿ ಅಡುಗೆ ಮನೆಯ ಸಂಕೇತ ಸಂಖ್ಯೆಯನ್ನೊಂದಿರುತ್ತದೆ.

ಉದಾ: 1) ಮೈಸೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ 02 ಮಾಸ್ಟರ್ ಅಡುಗೆ ಮನೆ ಹಾಗೂ 12 ಕ್ಯಾಂಟೀನ್‌ಗಳಿದ್ದು, ಮಾಸ್ಟರ್ ಅಡುಗೆ ಮನೆ ಸಂಕೇತ ಸಂಖ್ಯೆ 01 ಆಗಿದ್ದಲ್ಲಿ ಮಾಸ್ಟರ್ ಅಡುಗೆ ಮನೆ ವ್ಯಾಪ್ತಿಗೆ ಬರುವ ಕ್ಯಾಂಟೀನ್‌ಗಳಿಗೆ ಈ ರೀತಿ MK1/C1, MK1/C2, MK1/C3, MK1/C4, MK1/C5 ಮತ್ತು MK1/C6 ಎಂದು ನಮೂದಿಸುವುದು.

ಮಾಸ್ಟರ್ ಅಡುಗೆ ಮನೆ ಸಂಖ್ಯೆ			ಕ್ಯಾಂಟೀನ್ ಸಂಖ್ಯೆ	
MK	1	–	C	1

ಮಾಸ್ಟರ್ ಅಡುಗೆ ಮನೆ ಸಂಖ್ಯೆ			ಕ್ಯಾಂಟೀನ್ ಸಂಖ್ಯೆ	
MK	2	–	C	1

2) ಮೈಸೂರು ಜಿಲ್ಲಾ ವ್ಯಾಪ್ತಿಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ 06 ಅಡುಗೆ ಕೋಣೆಯೊಂದಿಗೆ ಕ್ಯಾಂಟೀನ್‌ಗಳಿರುತ್ತದೆ.
ಹುಣಸೂರು ನಗರರಸಭೆ ವ್ಯಾಪ್ತಿಯ ಅಡುಗೆ ಕೋಣೆಯೊಂದಿಗೆ ಕ್ಯಾಂಟೀನ್‌ಗೆ ಸಂಬಂಧಿಸಿದಂತೆ ಅಡುಗೆ ಕೋಣೆ ಸಂಖ್ಯೆ 03 ಆದಲ್ಲಿ ಕ್ಯಾಂಟೀನ್ ಸಂಖ್ಯೆ 01 ಆಗಿರುತ್ತದೆ.

ಅಡುಗೆ ಮನೆಯೊಂದಿಗೆ ಕ್ಯಾಂಟೀನ್ ಸಂಖ್ಯೆ			ಕ್ಯಾಂಟೀನ್ ಸಂಖ್ಯೆ	
KC	3	–	0	1

ನಂಜನಗೂಡು ಪುರಸಭೆ ವ್ಯಾಪ್ತಿಯ ಅಡುಗೆ ಕೋಣೆಯೊಂದಿಗೆ ಕ್ಯಾಂಟೀನ್‌ಗೆ ಸಂಬಂಧಿಸಿದಂತೆ ಅಡುಗೆ ಕೋಣೆ ಸಂಖ್ಯೆ 04 ಆದಲ್ಲಿ ಕ್ಯಾಂಟೀನ್ ಸಂಖ್ಯೆ 01 ಆಗಿರುತ್ತದೆ.

ಅಡುಗೆ ಮನೆ ಸಂಖ್ಯೆ			ಕ್ಯಾಂಟೀನ್ ಸಂಖ್ಯೆ	
KC	4	–	0	1

ಟಿ.ನರಸೀಪುರ ಪುರಸಭೆ ವ್ಯಾಪ್ತಿಯ ಅಡುಗೆ ಕೋಣೆಯೊಂದಿಗೆ ಕ್ಯಾಂಟೀನ್‌ಗೆ ಸಂಬಂಧಿಸಿದಂತೆ ಅಡುಗೆ ಕೋಣೆ ಸಂಖ್ಯೆ 05 ಆದಲ್ಲಿ ಕ್ಯಾಂಟೀನ್ ಸಂಖ್ಯೆ 01 ಆಗಿರುತ್ತದೆ.

ಅಡುಗೆ ಮನೆ ಸಂಖ್ಯೆ			ಕ್ಯಾಂಟೀನ್ ಸಂಖ್ಯೆ	
0	5	–	0	1

ಪಿರಿಯಾಪಟ್ಟಣ ಪುರಸಭೆ ವ್ಯಾಪ್ತಿಯ ಅಡುಗೆ ಕೋಣೆಯೊಂದಿಗೆ ಕ್ಯಾಂಟೀನ್‌ಗೆ ಸಂಬಂಧಿಸಿದಂತೆ ಅಡುಗೆ ಕೋಣೆ ಸಂಖ್ಯೆ 06 ಆದಲ್ಲಿ ಕ್ಯಾಂಟೀನ್ ಸಂಖ್ಯೆ 01 ಆಗಿರುತ್ತದೆ.

ಅಡುಗೆ ಮನೆ ಸಂಖ್ಯೆ			ಕ್ಯಾಂಟೀನ್ ಸಂಖ್ಯೆ	
0	6	–	0	1

ಕೃಷ್ಣರಾಜನಗರ ಪುರಸಭೆ ವ್ಯಾಪ್ತಿಯ ಅಡುಗೆ ಕೋಣೆಯೊಂದಿಗೆ ಕ್ಯಾಂಟೀನ್‌ಗೆ ಸಂಬಂಧಿಸಿದಂತೆ ಅಡುಗೆ ಕೋಣೆ ಸಂಖ್ಯೆ 07 ಆದಲ್ಲಿ ಕ್ಯಾಂಟೀನ್ ಸಂಖ್ಯೆ 01 ಆಗಿರುತ್ತದೆ.

ಅಡುಗೆ ಮನೆ ಸಂಖ್ಯೆ			ಕ್ಯಾಂಟೀನ್ ಸಂಖ್ಯೆ	
0	7	–	0	1

ಹೆಗ್ಗಡದೇವನಕೋಟೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಅಡುಗೆ ಕೋಣೆಯೊಂದಿಗೆ ಕ್ಯಾಂಟೀನ್‌ಗೆ ಸಂಬಂಧಿಸಿದಂತೆ ಅಡುಗೆ ಕೋಣೆ ಸಂಖ್ಯೆ 08 ಆದಲ್ಲಿ ಕ್ಯಾಂಟೀನ್ ಸಂಖ್ಯೆ 01 ಆಗಿರುತ್ತದೆ.

ಅಡುಗೆ ಮನೆ ಸಂಖ್ಯೆ			ಕ್ಯಾಂಟೀನ್ ಸಂಖ್ಯೆ	
0	8	–	0	1

2. ಅಡುಗೆ ಮನೆಗಳಿಂದ ರವಾನೆಯಾಗುವ ಆಹಾರವನ್ನು ಲೆಕ್ಕವಿಡುವುದು –

2.1 ಮಾಸ್ಟರ್ ಅಡುಗೆ ಮನೆಗೆ ನಿಗಧಿಪಡಿಸಿದ ಅಥವಾ ಸಂಯೋಜಿಸಿದ ಕ್ಯಾಂಟೀನ್‌ಗಳಿಗೆ ಆಹಾರ ತಯಾರಿಸಿ ಆಹಾರ ಪದಾರ್ಥಗಳನ್ನು ರವಾನಿಸುವುದು. ಈ ರೀತಿ ಸರಬರಾಜು ಮಾಡಿದ ಆಹಾರ ಪದಾರ್ಥಗಳ ಹೊರ ಹೋಗುಯವಿಕೆಯು ಮಾಸ್ಟರ್ ಅಡುಗೆ ಮನೆ ಹೊಂದಿರುವ ಮಹಾನಗರ ಪಾಲಿಕೆ/ನಗರಸಭೆಯಿಂದ ಗೊತ್ತುಪಡಿಸಿದ ಪರಿಸರ ಅಭಿಯಂತರರು (ನೋಡಲ್ ಆಫೀಸರ್) ರವರ ಮೇಲ್ವಿಚಾರಣೆಗೊಳಪಟ್ಟಿರುತ್ತದೆ. ಅಡುಗೆ ಮನೆಯ ಉಸ್ತುವಾರಿದಾರರು ಪ್ರತಿಬಾರಿ ಅಡುಗೆ ಮನೆಯಿಂದ ಸರಬರಾಜು ಮಾಡುವ ಅಡುಗೆ ಪದಾರ್ಥಗಳು ಅಂದರೆ ಬೆಳಗಿನ ಉಪಹಾರ/ ಮಧ್ಯಾಹ್ನದ/ರಾತ್ರಿ ಊಟಗಳಿಗೆ ಸಂಬಂಧಿಸಿದಂತೆ ತಯಾರಿಸಿರುವ ಆಹಾರ ಪರಿಮಾಣವನ್ನು ಸರಬರಾಜು ಪಟ್ಟಿ ನಮೂನೆ-01ರಲ್ಲಿ ಭರ್ತಿ ಮಾಡಿ ಆಹಾರದೊಂದಿಗೆ ಕಳುಹಿಸಿ ಕೊಡುವುದು. ಮಾಸ್ಟರ್ ಅಡುಗೆ ಮನೆಯಿಂದ ಕ್ಯಾಂಟೀನ್‌ಗೆ ಆಹಾರ ಸ್ವೀಕರಿಸುವ ವೇಳೆ ಈ ನಮೂನೆಯಲ್ಲಿ ನಮೂದಿಸಿರುವ ವಿವರಣೆಗಳನ್ನು ಕ್ಯಾಂಟೀನ್ ಇರುವ ವಾರ್ಡ್ ಆರೋಗ್ಯ ನಿರೀಕ್ಷಕ ಪರಿಶೀಲಿಸಿ ದೃಢೀಕರಿಸುವುದು.

2.2 ಸರಬರಾಜು ವಹಿಯು ಅಡುಗೆ ಮನೆಯಿಂದ ದಿನಾಂಕವಾರು ಮಾಸ್ಟರ್ ಅಡುಗೆ ಕೋಣೆಯಿಂದ ಸರಬರಾಜು ಮಾಡಿದ ಆಹಾರ ಪದಾರ್ಥಗಳ ವಿವರಗಳನ್ನೊಳಗೊಂಡಿರುತ್ತದೆ. ಆಹಾರ ಪದಾರ್ಥಗಳ ಸರಬರಾಜಿಗೂ ಮುಂಚಿತವಾಗಿ ಗುತ್ತಿಗೆದಾರರಿಂದ ನೇಮಕಗೊಂಡ ಅಡುಗೆ ಮನೆ ಉಸ್ತುವಾರಿದಾರರು ಸರಬರಾಜು ಪಟ್ಟಿಯಲ್ಲಿನ ವಿವರಗಳನ್ನು ನಮೂನೆ-02 ಅಡುಗೆ ಮನೆ ಸರಬರಾಜು ವಹಿಯಲ್ಲಿ ದಾಖಲಿಸುವುದು. ಸರಬರಾಜು ವಹಿಗೆ ಅಡುಗೆ ಮನೆಯ ಉಸ್ತುವಾರಿದಾರರು ಮತ್ತು ಮಹಾನಗರ ಪಾಲಿಕೆ/ನಗರಸಭೆ ವತಿಯಿಂದ ಗೊತ್ತುಪಡಿಸಿದ ಪರಿಸರ ಅಭಿಯಂತರರು ಪ್ರತಿ ಹೊತ್ತು ಪರಿಶೀಲಿಸಿ ಸಹಿ ಮಾಡುವುದು.

2.3 ಆಹಾರ ಪದಾರ್ಥ ಸ್ವೀಕರಿಸಿದ್ದಕ್ಕೆ, ಗುತ್ತಿಗೆದಾರರಿಂದ ನೇಮಕಗೊಂಡ ಕ್ಯಾಂಟೀನ್ ಉಸ್ತುವಾರಿದಾರರು ನಮೂನೆ-3ರಲ್ಲಿ ಸ್ವೀಕೃತಿಯನ್ನು ತ್ರಿಪ್ರತಿಗಳಲ್ಲಿ ನಿರ್ವಹಿಸುವುದು. ಸ್ವೀಕೃತಿ ವಹಿಯ ಮೂರನೇ ಪ್ರತಿಯನ್ನು ಕ್ಯಾಂಟೀನ್‌ನಲ್ಲಿ ಉಳಿಸಿಕೊಂಡು, ಮೂಲ ಮತ್ತು ಎರಡನೇ ಪ್ರತಿಯನ್ನು ಸಂಬಂಧಪಟ್ಟ ಅಡುಗೆ ಮನೆಗೆ ಹಿಂತಿರುಗಿಸುವುದು. ಕ್ಯಾಂಟೀನ್ ಇರುವ ವಾರ್ಡ ಆರೋಗ್ಯ ನಿರೀಕ್ಷಕರು ಆಹಾರದ ಪ್ರಮಾಣವನ್ನು ತೂಕದ

ಯಂತ್ರದಲ್ಲಿ ಪರೀಕ್ಷಿಸಿಕೊಂಡು ಸ್ವೀಕೃತಿ ವಹಿಯಲ್ಲಿ ಸಹಿ ಮಾಡುವುದು. ಈ ರೀತಿ ಸಲ್ಲಿಸಿದ ಸ್ವೀಕೃತಿ ಪಟ್ಟಿಗಳನ್ನು ಪರಿಸರ ಅಭಿಯಂತರರು ಪಡೆದು ಕ್ರಮಾಂಕವಾಗಿ ಜೋಡಿಸಿ ಕಡತದಲ್ಲಿರಿಸಿ, ನಿರ್ವಹಿಸುವುದು.

2.4 ಅಡುಗೆ ಮನೆಯಿಂದ ತಯಾರಿಸಿದ ಆಹಾರ ಪದಾರ್ಥಗಳನ್ನು ಕ್ಯಾಂಟೀನ್‌ಗೆ ರವಾನಿಸುವುದು. ಈ ರೀತಿ ಸರಬರಾಜು ಮಾಡಿದ ಆಹಾರ ಪದಾರ್ಥಗಳ ಹೊರ ಹೋಗುಯಪಿಕೆಯು ಅಡುಗೆ ಮನೆಯೊಂದಿಗಿರುವ ಕ್ಯಾಂಟೀನ್ ಇರುವ ನಗರ ಸ್ಥಳೀಯ ಸಂಸ್ಥೆಗಳಿಂದ ಗೊತ್ತುಪಡಿಸಿದ ಪರಿಸರ ಅಭಿಯಂತರರು/ ಆರೋಗ್ಯ ನಿರೀಕ್ಷಕರು (ನೋಡಲ್ ಆಫೀಸರ್)ರವರ ಮೇಲ್ವಿಚಾರಣೆಗೊಳಪಟ್ಟಿರುತ್ತದೆ. ಗುತ್ತಿಗೆದಾರರಿಂದ ನೇಮಕಗೊಂಡ ಅಡುಗೆ ಮನೆ/ಕ್ಯಾಂಟೀನ್ ಉಸ್ತುವಾರಿದಾರರು ಪ್ರತಿಬಾರಿ ಅಡುಗೆ ಮನೆಯಿಂದ ಸರಬರಾಜು ಮಾಡುವ ಅಡುಗೆ ಪದಾರ್ಥಗಳು ಅಂದರೆ ಬೆಳಗಿನ ಉಪಹಾರ/ ಮಧ್ಯಾಹ್ನದ ಊಟ/ರಾತ್ರಿ ಊಟಗಳಿಗೆ ಸಂಬಂಧಿಸಿದಂತೆ ಆಹಾರ ತಯಾರಿಸಿರುವ ಪ್ರಮಾಣವನ್ನು ನಮೂನೆ-5ರ ಸರಬರಾಜು ಪಟ್ಟಿಯಲ್ಲಿ ಭರ್ತಿ ಮಾಡುವುದು. ಪರಿಸರ ಅಭಿಯಂತರರು/ ಆರೋಗ್ಯ ನಿರೀಕ್ಷಕರು ಆಹಾರ ಪಡೆದ ಕೂಡಲೇ ಆಹಾರದ ಪ್ರಮಾಣವನ್ನು ತೂಕದ ಯಂತ್ರದಲ್ಲಿ ಪರೀಕ್ಷಿಸಿಕೊಂಡು ಸಹಿ ಮಾಡುವುದು.

2.5 ಅಡುಗೆ ಮನೆಯಿಂದ ಕ್ಯಾಂಟೀನ್‌ಗೆ ತಯಾರಿಸಿದ ಆಹಾರ ಪದಾರ್ಥಗಳನ್ನು ರವಾನಿಸುವುದು. ಅಡುಗೆ ಮನೆಯಿಂದ ಪ್ರತಿ ಬಾರಿ ಸ್ವೀಕರಿಸಿದ ಆಹಾರ ಪದಾರ್ಥಗಳ ಪರಿಮಾಣಗಳ ವಿವರಗಳನ್ನು ಗುತ್ತಿಗೆದಾರರಿಂದ ನೇಮಕಗೊಂಡ ಅಡುಗೆ ಮನೆ/ಕ್ಯಾಂಟಿನ್ ಉಸ್ತುವಾರಿದಾರರು ಸರಬರಾಜು ಮತ್ತು ಸೀಕೃತಿ ವಹಿ ನಮೂನೆ-6 ರಲ್ಲಿ ದಾಖಲಿಸುವುದು. ನಗರ ಸ್ಥಳೀಯ ಸಂಸ್ಥೆಗಳಿಂದ ಗೊತ್ತುಪಡಿಸಿದ ಪರಿಸರ ಅಭಿಯಂತರರು/ಆರೋಗ್ಯ ನಿರೀಕ್ಷಕರು (ನೋಡಲ್ ಅಧಿಕಾರಿ)ರವರು ಈ ವಹಿಯಲ್ಲಿ ಪ್ರತಿಬಾರಿ ಪರೀಕ್ಷಿಸಿ ಸಹಿ ಮಾಡುವುದು. ಅಡುಗೆ ಮನೆ/ಕ್ಯಾಂಟೀನ್ ಉಸ್ತುವಾರಿದಾರರು ಸರಬರಾಜು ಮತ್ತು ಸ್ವೀಕೃತಿ ಪಟ್ಟಿಯನ್ನು ದಿನಾಂಕವಾರು ಕ್ರಮಾಂಕವಾಗಿ ಕಡತದಲ್ಲಿರಿಸಿ, ನಿರ್ವಹಿಸುವುದು.

3. ಬಿಲ್ಲು ಪಾವತಿಸುವ ಬಗ್ಗೆ

3.1 ಮಾಸ್ಟರ್ ಕಿಚನ್ ಹೊಂದಿರುವ ನಗರ ಸ್ಥಳೀಯ ಸಂಸ್ಥೆಗಳು ಅಡುಗೆ ಮನೆಯಿಂದ ಕ್ಯಾಂಟೀನ್‌ಗಳಿಗೆ ಅಹಾರ ಸರಬರಾಜು ಮಾಡುವುದು. ಪ್ರತಿ ಮಾಹೆಯ ಅಂತ್ಯದಲ್ಲಿ ಅಹಾರ ಸರಬರಾಜು ಮತ್ತು ಆಹಾರ ಸ್ವೀಕೃತಿ ವಹಿಯಲ್ಲಿ ದಾಖಲಿಸಿರುವ ಆಹಾರ ಪದಾರ್ಥಗಳ ಪರಿಮಾಣದ ವಿವರಗಳನ್ನು ಗುತ್ತಿಗೆದಾರರು ಉದ್ಧೃತ ನಾಲ್ಕು ಪ್ರತಿಗಳಲ್ಲಿ ನಮೂನೆ-4ರಲ್ಲಿ ತಯಾರಿಸುವುದು. ಉದ್ಧೃತ ಕ್ಯಾಂಟೀನ್ ಸರಬರಾಜು ಮತ್ತು ಸ್ವೀಕೃತಿ ವಹಿಯ ಪ್ರತಿಗಳಿಗೆ ಗುತ್ತಿಗೆದಾರರು/ ಅಧಿಕೃತ ಪ್ರತಿನಿಧಿಗಳು ಸಹಿ ಮಾಡುವುದು ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಪರಿಸರ ಅಭಿಯಂತರರು (ನೋಡಲ್ ಅಧಿಕಾರಿ)ರವರು ಸಹಿ ಮಾಡುವುದು.

3.2 ಮಾಸ್ಟರ್ ಕಿಚನ್ ಹೊಂದಿರದ ನಗರ ಸ್ಥಳೀಯ ಸಂಸ್ಥೆಗಳಿಗೆ ಅಡುಗೆ ಮನೆಗೆ ಹೊಂದಿಕೊಂಡಿರುವ ಕ್ಯಾಂಟೀನ್‌ಗೆ ಅಹಾರ ಸರಬರಾಜು ಮಾಡುವುದು. ಪ್ರತಿ ಮಾಹೆ ಅಂತ್ಯದಲ್ಲಿ ಅಹಾರ ಸರಬರಾಜು ಮಾಡಿರುವ ಆಹಾರ ಪದಾರ್ಥಗಳ ಪರಿಮಾಣ ವಿವರಗಳನ್ನು ಗುತ್ತಿಗೆದಾರರು ನಾಲ್ಕು ಪ್ರತಿಗಳಲ್ಲಿ ನಮೂನೆ-7ರಲ್ಲಿ ತಯಾರಿಸುವುದು. ಉದ್ಧೃತ ಕ್ಯಾಂಟೀನ್ ಸರಬರಾಜು ಮತ್ತು ಸ್ವೀಕೃತಿ ವಹಿಯ ಪ್ರತಿಗಳಿಗೆ ಗುತ್ತಿಗೆದಾರರು/ ಅಧಿಕೃತ ಪ್ರತಿನಿಧಿಗಳು ಸಹಿ ಮಾಡುವುದು ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಪರಿಸರ ಅಭಿಯಂತರರು/ಆರೋಗ್ಯ ನಿರೀಕ್ಷಕರು ನೋಡಲ್ ಅಧಿಕಾರಿರವರು ಸಹಿ ಮಾಡುವುದು.

4. ಬಿಲ್ಲು ಸಲ್ಲಿಕೆ

4.1 ಗುತ್ತಿಗೆದಾರರು ನಮೂನೆ-8ರಲ್ಲಿ ಬಿಲ್ಲನ್ನು (ಸಾರ್ವಜನಿಕರಿಗೆ ವಿತರಣೆಯಾದ ಪರಿಮಾಣಕ್ಕೆ ಅನುಗುಣವಾಗಿ) ನಾಲ್ಕು ಪ್ರತಿಗಳಲ್ಲಿ ತಯಾರಿಸುವುದು. ಮೂಲ, ಎರಡನೇ ಮತ್ತು ಮೂರನೇ ಬಿಲ್ಲುಗಳ ಪ್ರತಿಗಳನ್ನು ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳ ಆಯುಕ್ತರು/ಪೌರಾಯುಕ್ತರು/ಮುಖ್ಯಾಧಿಕಾರಿಗೆ ಉದ್ಧೃತ ಕ್ಯಾಂಟೀನ್ ಸರಬರಾಜು ವಹಿ ಮತ್ತು ಉದ್ಧೃತ ಕ್ಯಾಂಟೀನ್ ಸ್ವೀಕೃತ ವಹಿಯನ್ನು ಸರಬರಾಜು ಮಾಡಿದ ತಿಂಗಳು ಕಳೆದ ನಂತರ ಮೊದಲನೇ ವಾರದಲ್ಲಿ ಸಲ್ಲಿಸುವುದು.

4.2 ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳ ಆಯುಕ್ತರು /ಪೌರಾಯುಕ್ತರು/ಮುಖ್ಯಾಧಿಕಾರಿಗಳ ಗುತ್ತಿಗೆದಾರರು ಸಲ್ಲಿಸಿರುವ ಬಿಲ್ಲಿನ ಬಗ್ಗೆ ತಪಾಸಣೆ ಮಾಡಿ, ಎಲ್ಲಾ ಬಿಲ್ಲು ಪ್ರತಿಗಳಿಗೆ ದೃಢೀಕರಿಸಿ ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ಬಿಲ್ಲು ಪಾವತಿಗಾಗಿ ಸಲ್ಲಿಸತಕ್ಕದ್ದು. ಮೂರನೇ ಪ್ರತಿಯನ್ನು ಕಛೇರಿಯಲ್ಲಿ ದಾಖಲೆಗಾಗಿ ಉಳಿಸಿಕೊಳ್ಳವುದು.

4.3 ಆಯುಕ್ತರು / ಪೌರಾಯುಕ್ತರು/ ಮುಖ್ಯಾಧಿಕಾರಿ ಪ್ರಮುಖ ಪ್ರಕರಣಗಳಲ್ಲಿ ಕಡಿಮೆ ಬೇಡಿಕೆ/ ಸರಬರಾಜಿನಲ್ಲಿ ದೋಷಗಳು/ ಅಥವಾ ಮಾರಾಟದ ಪರಿಮಾಣದ ಬಗ್ಗೆ ಪರಿಶೀಲಿಸುವುದು.

4.4 ಸಂಬಂಧಪಟ್ಟ ಜಿಲ್ಲೆಗಳ ಯೋಜನಾ ನಿರ್ದೇಶಕರು ನಗರ ಸ್ಥಳೀಯ ಸಂಸ್ಥೆಗಳ ಆಯುಕ್ತರು / ಪೌರಾಯುಕ್ತರು/ಮುಖ್ಯಾಧಿಕಾರಿ ಸಲ್ಲಿಸಿರುವ ಬಿಲ್ಲು ದಾಖಲೆಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ಬಿಲ್ಲು ಅನುಮೋದನೆಗಾಗಿ ಜಿಲ್ಲಾಧಿಕಾರಿ ರವರಿಗೆ ಕಡತವನ್ನು ಮಂಡಿಸುವುದು.

4.5 ಜಿಲ್ಲಾಧಿಕಾರಿ ಅವರು ಬಿಲ್ಲುಗಳ ದಾಖಲೆಗಳ ಪರಿಶೀಲನೆಯ ನಂತರ ಬಿಲ್ಲಿನ ಮೊತ್ತವನ್ನು ಗುತ್ತಿಗೆದಾರರಿಗೆ ಪಾವತಿಸಲು ಅನುಮೋದಿಸುವುದು.

5. ಬಿಲ್ಲು ಪಾವತಿ – ಪ್ರಕ್ರಿಯೆಗಳ ವೇಳಾಪಟ್ಟಿ

5.1 ಗುತ್ತಿಗೆದಾರರಿಗೆ ಹಣ ಪಾವತಿಸಲು ಕೈಗೊಳ್ಳಬೇಕಾದ ಪ್ರಕ್ರಿಯೆಗಳ ವೇಳಾಪಟ್ಟಿ ಕೆಳಕಂಡಂತಿದೆ (ಗುತ್ತಿಗೆದಾರರು ಪ್ರತಿ ಮಾಹೆಯ 5ನೇ ತಾರೀಕಿನೊಳಗೆ ನಮೂನೆ–8ರಲ್ಲಿ ಬಿಲ್ಲನ್ನು ಸಲ್ಲಿಸುವುದು)

ಕರ್ತವ್ಯ	ನಿರ್ವಹಿಸಬೇಕಾದ ಅಧಿಕಾರಿ/ಪ್ರಾಧಿಕಾರ	ಕಾಲಮಿತಿ
ಗುತ್ತಿಗೆದಾರರು ಸಲ್ಲಿಸಿದ ಬಿಲ್ಲನ್ನು ಪರಿಶಿಲಿಸುವುದು ಮತ್ತು ದೃಢೀಕರಿಸುವುದು	ಆಯುಕ್ತರು / ಪೌರಾಯುಕ್ತರು/ ಮುಖ್ಯಾಧಿಕಾರಿ	7ನೇ ತಾರೀಖಿನೊಳಗಾಗಿ
ಬಿಲ್ಲು ಪಾವತಿಗೆ ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸುವುದು	ಯೋಜನಾ ನಿರ್ದೇಶಕರು	10ನೇ ತಾರೀಖಿನೊಳಗಾಗಿ
ಬಿಲ್ಲು ಪಾವತಿಗೆ ಅನುಮೋದಿಸುವುದು	ಜಿಲ್ಲಾಧಿಕಾರಿರವರು	15ನೇ ತಾರೀಖಿನೊಳಗಾಗಿ

6. ಆಹಾರ ಸರಬರಾಜುದಾರರು ಕಡ್ಡಾಯವಾಗಿ ಪ್ರತಿ ಅಡುಗೆ ಕೋಣೆ ಮತ್ತು ಕ್ಯಾಂಟೀನ್‌ಗಳಲ್ಲಿ ಭೇಟಿ / ಸಂದರ್ಶಕರ ಪುಸ್ತಕ(Visitors Book)ನ್ನು ನಿರ್ವಹಿಸುವುದು. ಜಿಲ್ಲೆಯ ಇಂದಿರಾ ಕ್ಯಾಂಟೀನ್ ಯೋಜನೆಯ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿಯ ಸದಸ್ಯರುಗಳು ಹಾಗೂ ಇತರೆ ಅಧಿಕಾರಿಗಳು ಅಡುಗೆ ಕೋಣೆ ಅಥವಾ ಕ್ಯಾಂಟೀನ್‌ಗಳಿಗೆ ಭೇಟಿ ನೀಡಿದಾಗ ಸದರಿ ಪುಸ್ತಕದಲ್ಲಿ ತಪಾಸಣಾ ವಿವರಗಳನ್ನು ನಮೂದಿಸುವುದು.

ಇಂದಿರಾ ಕ್ಯಾಂಟೀನ ಸಂಬಂಧಿಸಿದಂತೆ ಬಿಲ್ಲಿನ ನಮೂನೆಗಳ ಸಂಕ್ಷಿಪ್ತ ವಿವರ

ಕ್ರ.ಸಂ	ನಮೂನೆಯ ಹೆಸರು	ಉದ್ದೇಶ	ಅವಧಿ	ದೃಢೀಕರಣ ಪ್ರಾಧಿಕರಣ	ನಿರ್ವಹಿಸುವ/ ತಯಾರಿಸುವವರು
1.	ಸರಬರಾಜು ಪಟ್ಟಿ (ನಮೂನೆ-1)	ಈ ನಮೂನೆಯು ಅಡಿಗೆ ಮನೆಯಿಂದ ಕ್ಯಾಂಟೀನ್‌ಗೆ ವಿತರಿಸಲಾಗುವ ಬೆಳಗಿನ ಉಪಹಾರ/ಮಧ್ಯಾಹ್ನ/ರಾತ್ರಿ ಊಟದ ಜೊತೆಗೆ ತಲುಪಿಸತಕ್ಕದ್ದು. ಆಹಾರ ಪದಾರ್ಥದ ಸ್ವೀಕೃತಿಯನ್ನು ಕ್ಯಾಂಟೀನ್ ಇರುವ ವಾರ್ಡನ ಆರೋಗ್ಯ ನಿರೀಕ್ಷಕರು ಧೃಢೀಕರಿಸುವುದು.	ಮಾಸ್ಟರ್ ಅಡುಗೆ ಕೋಣೆಯಿಂದ ಕ್ಯಾಂಟೀನ್‌ಗೆ ರವಾನಿಸಲಾಗಿರುವ ಅಹಾರ ಪದಾರ್ಥಗಳನ್ನು ಸ್ವೀಕರಿಸುವಾಗ	ಕ್ಯಾಂಟೀನ್ ಇರುವ ವಾರ್ಡನ ಆರೋಗ್ಯ ನಿರೀಕ್ಷಕ	ಗುತ್ತಿಗೆದಾರರಿಂದ ನಿಯೋಜಿತಗೊಂಡ ಅಡಿಗೆ ಮನೆ ಉಸ್ತುವಾರಿದಾರ
2.	ಸರಬರಾಜು ವಿತರಣಾ ವಹಿ (ನಮೂನೆ-2)	ಈ ನಮೂನೆಯನ್ನು ಗುತ್ತಿಗೆದಾರರಿಂದ ನಿಯೋಜಿತಗೊಂಡ ಅಡಿಗೆ ಮನೆ ಉಸ್ತುವಾರಿದಾರ ಅಡಿಗೆ ಮನೆಯಿಂದ ಕ್ಯಾಂಟೀನ್‌ಗೆ ಆಹಾರ ಪದಾರ್ಥಗಳ ವಿತರಣೆಯನ್ನು ದಾಖಲಿಸಲು ನಿರ್ವಹಿಸತಕ್ಕದ್ದು. ಪ್ರತಿ ಕ್ಯಾಂಟೀನ್‌ಗೆ ಒಂದು ವಹಿಯನ್ನು ನಿರ್ವಹಿಸುವುದು.	ದೈನಂದಿನ ಆಧಾರದಲ್ಲಿ ನಿರ್ವಹಿಸುವುದು	ಪರಿಸರ ಅಭಿಯಂತರರು	ಗುತ್ತಿಗೆದಾರರಿಂದ ನಿಯೋಜಿತಗೊಂಡ ಅಡಿಗೆ ಮನೆ ಉಸ್ತುವಾರಿದಾರ
3.	ಕ್ಯಾಂಟೀನ್ ವಿತರಣಾ ವಹಿ (ನಮೂನೆ-3)	ಈ ನಮೂನೆಯನ್ನು ಗುತ್ತಿಗೆದಾರರಿಂದ ನಿಯೋಜಿತಗೊಂಡ ಕ್ಯಾಂಟೀನ್ ಉಸ್ತುವಾರಿದಾರ ಅಡುಗೆ ಮನೆಯಿಂದ ಕ್ಯಾಂಟೀನ್‌ಗೆ ಆಹಾರ ಪದಾರ್ಥವನ್ನು ಸ್ವೀಕರಿಸಿದ ವಿವರಗಳನ್ನು ದಾಖಲಿಸಲು ನಿರ್ವಹಿಸತಕ್ಕದು	ದೈನಂದಿನ ಆಧಾರದಲ್ಲಿ ಅಹಾರ ಪದಾರ್ಥಗಳನ್ನು ವಿತರಿಸುವಾಗ	ಕ್ಯಾಂಟೀನ್ ಇರುವ ವಾರ್ಡನ ಆರೋಗ್ಯ ನಿರೀಕ್ಷಕರು	ಗುತ್ತಿಗೆದಾರರಿಂದ ನಿಯೋಜಿತಗೊಂಡ ಕ್ಯಾಂಟೀನ್ ಉಸ್ತುವಾರಿದಾರ
4.	ಉದ್ಧೃತ ಕ್ಯಾಂಟೀನ್ ಸರಬರಾಜು ಮತ್ತು ವಿತರಣಾ ವಹಿ (ನಮೂನೆ-4)	ಪ್ರತಿ ತಿಂಗಳು ಕ್ಯಾಂಟೀನ್‌ನ ಪ್ರತಿ ದಿನದ ವಿತರಣೆಯಂತೆ ವಿವರಗಳನ್ನು ತಯಾರಿಸಿ ಬಿಲ್ಲಿನೊಂದಿಗೆ ಅಡಕಗೊಳಿಸಿ ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಯ ಆಯುಕ್ತರು/ಪೌರಾಯುಕ್ತರು ಸಲ್ಲಿಸುವುದು	ಮಾಹೆಯಾನ	ಪರಿಸರ ಅಭಿಯಂತರರು	ಆಹಾರ ಗುತ್ತಿಗೆದಾರ

5.	ಸರಬರಾಜು ಪಟ್ಟಿ (ನಮೂನೆ-5)	ಈ ನಮೂನೆಯು ಅಡಿಗೆ ಮನೆಯಿಂದ ಕ್ಯಾಂಟೀನ್‌ಗೆ ವಿತರಿಸಲಾಗುವ ಬೆಳಗಿನ ಉಪಹಾರ/ ಮಧ್ಯಾಹ್ನ / ರಾತ್ರಿ ಊಟದ ಜೊತೆಗೆ ಕಳುಹಿಸುವುದು.	ಅಹಾರ ಪದಾರ್ಥಗಳನ್ನು ವಿತರಿಸುವಾಗ	ಪರಿಸರ ಅಭಿಯಂತರರು /ಆರೋಗ್ಯ ನಿರೀಕ್ಷಕರು	ಗುತ್ತಿಗೆದಾರರಿಂದ ನಿಯೋಜಿತಗೊಂಡ ಅಡಿಗೆ ಮನೆ / ಕ್ಯಾಂಟೀನ್ ಉಸ್ತುವಾರಿದಾರ
6.	ಸರಬರಾಜು ಮತ್ತು ಸ್ವೀಕೃತಿ ವಹಿ (ನಮೂನೆ-6)	ಈ ನಮೂನೆಯನ್ನು ಗುತ್ತಿಗೆದಾರರಿಂದ ನಿಯೋಜಿತಗೊಂಡ ಅಡಿಗೆ ಮನೆ / ಕ್ಯಾಂಟೀನ್ ಉಸ್ತುವಾರಿದಾರ ಅಡಿಗೆ ಮನೆಯಿಂದ ಕ್ಯಾಂಟೀನ್‌ಗೆ ಆಹಾರ ಪದಾರ್ಥಗಳ ವಿತರಣೆಯನ್ನು ಹಾಗೂ ಸ್ವೀಕೃತಿಯನ್ನು ದಾಖಲಿಸಲು ನಿರ್ವಹಿಸತಕ್ಕದ್ದು. ಪ್ರತಿ ಕ್ಯಾಂಟೀನ್‌ಗೆ ಒಂದು ವಹಿಯನ್ನು ನಿರ್ವಹಿಸುವುದು.	ದೈನಂದಿನ ಆಧಾರದಲ್ಲಿ ನಿರ್ವಹಿಸುವುದು	ಪರಿಸರ ಅಭಿಯಂತರರು / ಆರೋಗ್ಯ ನಿರೀಕ್ಷಕರು	ಗುತ್ತಿಗೆದಾರರಿಂದ ನಿಯೋಜಿತಗೊಂಡ ಅಡಿಗೆ ಮನೆ / ಕ್ಯಾಂಟೀನ್ ಉಸ್ತುವಾರಿದಾರ
7	ಉದ್ಧೃತ ಕ್ಯಾಂಟೀನ್ ಸರಬರಾಜು ಮತ್ತು ವಿತರಣಾ ವಹಿ (ನಮೂನೆ-7)	ಪ್ರತಿ ತಿಂಗಳು ಕ್ಯಾಂಟೀನ್‌ನ ಪ್ರತಿ ದಿನದ ವಿತರಣೆಯಂತೆ ವಿವರಗಳನ್ನು ತಯಾರಿಸಿ ಬಿಲ್ಲಿನೊಂದಿಗೆ ಅಡಕಗೊಳಿಸಿ ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಯ ಪೌರಾಯುಕ್ತರು/ ಮುಖ್ಯಾಧಿಕಾರಿಗೆ ಸಲ್ಲಿಸುವುದು	ಮಾಹೆಯಾನ	ಪರಿಸರ ಅಭಿಯಂತರರು / ಆರೋಗ್ಯ ನಿರೀಕ್ಷಕರು	ಆಹಾರ ಗುತ್ತಿಗೆದಾರ

ಕರ್ನಾಟಕ ಸರಕಾರ

ಯೋಜನಾ ನಿರ್ದೇಶಕರ ಕಛೇರಿ,ಜಿಲ್ಲಾ ನಗರಾಭಿವೃದ್ಧಿ ಕೋಶ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ದೂರವಾಣಿ ಸಂ: 0824-2220593, Email : dudc_dkd@yahoo.co.in

ಮುನ್(4) /ಎಲ್ ಎ ಕ್ಯೂ 501 (591) /2019-20 ದಿನಾಂಕ: 04-03-2020

ರಿಗೆ,

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಪರಿಷತ್
ಅಂಚೆಪೆಟ್ಟಿಗೆ ಸಂಖ್ಯೆ : 5079
ಬೆಂಗಳೂರು-560001

ಮಾನ್ಯರೇ,

ವಿಷಯ: ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶನ ಹೊಂದಿದವರು) ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 501(591)ಕ್ಕೆ ಸಂಬಂಧಿಸಿದ ಉತ್ತರವನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ : ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ವಿಧಾನ ಸಭೆ ಇವರ ಪತ್ರ ಸಂಖ್ಯೆ: ಕೆಎಲ್ ಸಿ : ಕ್ಯೂ:140ನೇಅ: 591 : 2020 ದಿನಾಂಕ : 27-02-2020

****

ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿನ /ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 501 (591)ಕ್ಕೆ ಉತ್ತರಗಳನ್ನು ದಕ್ಷಿಣ ಕನ್ನಡ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಂದ ಪಡೆದು ಈ ಕೆಳಗಿನಂತೆ ನಿಗದಿತ ನಮೂನೆಯಲ್ಲಿ ಕ್ರೋಢೀಕರಿಸಿ ಇದರೊಂದಿಗೆ ಲಗ್ತೀಕರಿಸಿ ತಮ್ಮ ಅವಗಾಹನೆಗೆ ಸಲ್ಲಿಸಲಾಗಿದೆ.

ತಮ್ಮ ನಂಬುಗೆಯ,

ಯೋಜನಾ ನಿರ್ದೇಶಕರು
ಜಿಲ್ಲಾ ನಗರಭಿವೃದ್ಧಿ ಕೋಶ
ದ.ಕ.ಜಿಲ್ಲೆ,ಮಂಗಳೂರು

ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶನ ಹೊಂದಿದವರು)ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 501(591)ಕ್ಕೆ ಉತ್ತರ

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ನಗರ ಸ್ಥಳೀಯ ಸಂಸ್ಥೆಯ ಹೆಸರು</th><th>ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ</th></tr>
<tr><td rowspan="6">ಅ)</td><td rowspan="6">ರಾಜ್ಯದಲ್ಲಿ ಎಷ್ಟು ಇಂದಿರಾ ಕ್ಯಾಂಟೀನ್ ಗಳು ಕಾರ್ಯ ನಿರ್ವಹಿಸುತ್ತಿದೆ: ದಿನವೊಂದಕ್ಕೆ ಎಷ್ಟು ಮಂದಿ ಉಪಾಹಾರವನ್ನು ಸೇವಿಸುತ್ತಿದ್ದಾರೆ ; (ವಿವರ ನೀಡುವುದು)</td><td>ಮಂಗಳೂರು ಮಹಾನಗರ ಪಾಲಿಕೆ</td><td>ಮಂಗಳೂರು ಮಹಾನಗರಪಾಲಿಕೆಯಲ್ಲಿ ಒಟ್ಟು 5 ಸಂಖ್ಯೆ ಕ್ಯಾಂಟೀನ್‌ಗಳನ್ನು ನಿರ್ಮಿಸಲಾಗಿದೆ. (ಒಂದು ವರ್ಷದ ಸರಸರಿ - ದಿನಕ್ಕೆ)
<table>
<tr><th></th><th>ಬೆಳಗ್ಗೆ</th><th>ಮಧ್ಯಾಹ್ನ</th><th>ರಾತ್ರಿ</th><th>ಒಟ್ಟು ಪ್ರತಿ ದಿನಕ್ಕೆ</th></tr>
<tr><td>ಉರ್ವ ಬಳಿ</td><td>469</td><td>492</td><td>340</td><td>1301</td></tr>
<tr><td>ಕಾವೂರು ಬಳಿ</td><td>388</td><td>411</td><td>278</td><td>1077</td></tr>
<tr><td>ಲೇಡಿಗೋಷನ್ ಬಳಿ</td><td>489</td><td>517</td><td>357</td><td>1363</td></tr>
<tr><td>ಪಂಪ್‌ವೆಲ್ ಬಳಿ</td><td>460</td><td>487</td><td>334</td><td>1281</td></tr>
<tr><td>ಸುರತ್ಕಲ್ ಬಳಿ</td><td>446</td><td>469</td><td>319</td><td>1234</td></tr>
</table></td></tr>
<tr><td>ಬಂಟ್ವಾಳ ಪುರಸಭೆ</td><td>ಬಂಟ್ವಾಳ ಪುರಸಭೆ ಇಂದಿರಾ ಕ್ಯಾಂಟೀನ್-1 . ದಿನವೊಂದಕ್ಕೆ 900 ಗ್ರಾಹಕರು ಉಪಾಹಾರವನ್ನು ಸೇವಿಸುತ್ತಿದ್ದಾರೆ.</td></tr>
<tr><td>ಬೆಳ್ತಂಗಡಿ ನಗರ ಪಂಚಾಯತ್</td><td>ಬೆಳ್ತಂಗಡಿ ಪಟ್ಟಣ ಪಂಚಾಯತ್‌ಗೆ ಒಂದು ಇಂದಿರಾ ಕ್ಯಾಂಟೀನ್ ಮಂಜೂರಾಗಿದ್ದರೂ ಕ್ಯಾಂಟೀನ್ ನಿರ್ಮಾಣವಾಗಿರುವುದಿಲ್ಲ</td></tr>
<tr><td>ಪುತ್ತೂರು ನಗರ ಸಭೆ</td><td>ಪುತ್ತೂರು ನಗರ ಸಭೆಯಿಂದ ದಿನವೊಂದಕ್ಕೆ ಅಂದಾಜು 1100 ಮಂದಿ ಉಪಹಾರವನ್ನು ಸೇವಿಸುತ್ತಿದ್ದಾರೆ</td></tr>
<tr><td>ಸುಳ್ಯ ನಗರ ಪಂಚಾಯತ್</td><td>ಸುಳ್ಯ ನಗರ ಪಂಚಾಯತಿನಲ್ಲಿ ಒಂದು ಇಂದಿರಾ ಕ್ಯಾಂಟೀನ್ ಕಾರ್ಯನಿರ್ವಹಿಸುತ್ತಿದೆ. ದಿನವೊಂದಕ್ಕೆ 700 ಮಂದಿ ಉಪಾಹಾರ ಸೇವಿಸುತ್ತಿದ್ದಾರೆ.</td></tr>
<tr><td>ಉಳ್ಳಾಲ ನಗರ ಸಭೆ</td><td>ಉಳ್ಳಾಲ ನಗರಸಭೆಯಲ್ಲಿ ಒಂದು ಇಂದಿರಾ ಕ್ಯಾಂಟೀನ್ ಕಾರ್ಯನಿರ್ವಹಿಸುತ್ತಿದೆ. ದಿನವೊಂದಕ್ಕೆ 1500 ಮಂದಿ ಉಪಾಹಾರ ಸೇವಿಸುತ್ತಿದ್ದಾರೆ.</td></tr>
<tr><td rowspan="4">ಆ)</td><td rowspan="4">ರಾಜ್ಯದಲ್ಲಿ ಇಂದಿರಾ ಕ್ಯಾಂಟೀನ್ ಆಹಾರದ ಗುಣಮಟ್ಟವನ್ನು ಪರಿಶೀಲಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)</td><td>ಮಂಗಳೂರು ಮಹಾನಗರ ಪಾಲಿಕೆ</td><td>ಮಹಾನಗರಪಾಲಿಕೆಯ ವತಿಯಿಂದ ಪ್ರತಿ ನಿತ್ಯ ಆರೋಗ್ಯ ನಿರೀಕ್ಷಕರಿಂದ ಪರಿಶೀಲಿಸಲಾಗುವುದು.</td></tr>
<tr><td>ಬಂಟ್ವಾಳ ಪುರಸಭೆ</td><td>ಬಂಟ್ವಾಳ ಪುರಸಭೆಯಿಂದ ಇಂದಿರಾ ಕ್ಯಾಂಟೀನ್ ಆಹಾರದ ಗುಣಮಟ್ಟವನ್ನು ಪರಿಶೀಲಿಸಲಾಗುತ್ತಿದೆ.</td></tr>
<tr><td>ಬೆಳ್ತಂಗಡಿ ನಗರ ಪಂಚಾಯತ್</td><td>ಅನ್ವಯಿಸುವುದಿಲ್ಲ</td></tr>
<tr><td>ಪುತ್ತೂರು ನಗರ ಸಭೆ</td><td>ಪುತ್ತೂರು ನಗರಸಭೆಯಿಂದ ಇಂದಿರಾ ಕ್ಯಾಂಟೀನ್ ಆಹಾರದ ಗುಣಮಟ್ಟವನ್ನು ಪರಿಶೀಲಿಸಲಾಗುತ್ತಿದೆ.</td></tr>
</table>

<table>
<tr><td></td><td></td><td>ಸುಳ್ಯ ನಗರ ಪಂಚಾಯತ್</td><td>ಸುಳ್ಯ ನಗರ ಪಂಚಾಯತಿಯಿಂದ ಇಂದಿರಾ ಕ್ಯಾಂಟೀನ್ ಆಹಾರದ ಗುಣಮಟ್ಟವನ್ನು ಪರಿಶೀಲಿಸಲಾಗುತ್ತಿದೆ.</td></tr>
<tr><td></td><td></td><td>ಉಳ್ಳಾಲ ನಗರ ಸಭೆ</td><td>ಉಳ್ಳಾಲ ನಗರ 1 ಸಭೆಯಿಂದ ಇಂದಿರಾ ಕ್ಯಾಂಟೀನ್ ಆಹಾರದ ಗುಣಮಟ್ಟವನ್ನು ಪರಿಶೀಲಿಸಲಾಗುತ್ತಿದೆ.</td></tr>
<tr><td rowspan="6">೨</td><td rowspan="6">ಮಂಗಳೂರು ನಗರದಲ್ಲಿ ಎಷ್ಟು ಇಂದಿರಾ ಕ್ಯಾಂಟೀನ್ ಗಳು ಕಾರ್ಯ ನಿರ್ವಹಿಸುತ್ತಿದೆ: ಎಷ್ಟು ಮಂದಿ ಉಪಾಹಾರವನ್ನು ಸೇವಿಸುತ್ತಿದ್ದಾರೆ ; (ವಿವರ ನೀಡುವುದು)</td><td>ಮಂಗಳೂರು ಮಹಾನಗರ ಪಾಲಿಕೆ</td><td>)ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಈ ಕೆಳಕಂಡ ಐದು ಇಂದಿರಾ ಕ್ಯಾಂಟೀನ್‌ಗಳು ಕಾರ್ಯನಿರ್ವಹಿಸುತ್ತಿದ್ದು;
1. ಲೇಡಿ ಗೋಶನ್
2. ಉರ್ವ ಸ್ಟೋರ್,
3. ಕಾವೂರು ಜಂಕ್ಷನ್,
4. ಸೂರತ್ಕಲ್ ಮಾರುಕಟ್ಟೆ,
5. ಪಂಪವೆಲ್ ಸರ್ಕಲ್
2) ಐದು ಇಂದಿರಾ ಕ್ಯಾಂಟೀನ್‌ಗಳಲ್ಲಿ 7,500 ಮಂದಿಗೆ ಪ್ರತಿದಿನ ಉಪಹಾರ ಸೇವಿಸಲು ಅನುಮತಿಯಿದ್ದು, ಇದರಲ್ಲಿ 6,256 ಮಂದಿ ಉಪಹಾರ ಸೇವಿಸುತ್ತಿದ್ದಾರ
<table>
<tr><th></th><th>ಬೆಳಿಗ್ಗೆ</th><th>ಮಧ್ಯಾಹ್ನ</th><th>ರಾತ್ರಿ</th><th>ಒಟ್ಟು</th></tr>
<tr><td>ಉರ್ವ ಬಳಿ</td><td>469</td><td>492</td><td>340</td><td>1301</td></tr>
<tr><td>ಕಾವೂರು ಬಳಿ</td><td>388</td><td>411</td><td>278</td><td>1077</td></tr>
<tr><td>ಲೇಡಿಗೋಷನ್ ಬಳಿ</td><td>489</td><td>517</td><td>357</td><td>1363</td></tr>
<tr><td>ಪಂಪ್‌ವೆಲ್ ಬಳಿ</td><td>460</td><td>487</td><td>334</td><td>1281</td></tr>
<tr><td>ಸುರತ್ಕಲ್ ಬಳಿ</td><td>446</td><td>469</td><td>319</td><td>1234</td></tr>
<tr><td colspan="4">ಒಟ್ಟು</td><td>6256</td></tr>
</table>
</td></tr>
<tr><td>ಬಂಟ್ವಾಳ ಪುರಸಭೆ</td><td rowspan="5">ಮಂಗಳೂರು ಮಹಾ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ</td></tr>
<tr><td>ಬೆಳ್ತಂಗಡಿ ನಗರ ಪಂಚಾಯತ್</td></tr>
<tr><td>ಪುತ್ತೂರು ನಗರ ಸಭೆ</td></tr>
<tr><td>ಸುಳ್ಯ ನಗರ ಪಂಚಾಯತ್</td></tr>
<tr><td>ಉಳ್ಳಾಲ ನಗರ ಸಭೆ</td></tr>
</table>

ಈ)	ಇಂದಿರಾ ಕ್ಯಾಂಟೀನ್ ನಲ್ಲಿ ಕಾಫಿ/ಟೀ ನೀಡಬೇಕೆಂಬ ಬೇಡಿಕೆ ಇದ್ದು, ಎಷ್ಟು ಕಡೆ ಪೂರೈಸಲಾಗುತ್ತದೆ ? (ವಿವರ ನೀಡುವುದು)	ಮಂಗಳೂರು ಮಹಾನಗರ ಪಾಲಿಕೆ	ಮಂಗಳೂರು ಮಹಾನಗರ ಪಾಲಿಕೆಯ **ಐದು** ಇಂದಿರಾ ಕ್ಯಾಂಟೀನ್‌ಗಳಲ್ಲಿ ಕಾಫೀ/ ಟೀ ಸೌಲಭ್ಯವಿರುವುದಿಲ್ಲ
		ಬಂಟ್ವಾಳ ಪುರಸಭೆ	ಬಂಟ್ವಾಳ ಪುರಸಭೆಯ ಇಂದಿರಾ **ಕ್ಯಾಂಟೀನ್ ನಲ್ಲಿ** ಕಾಫಿ/ಟೀ ಗೆ ಬೇಡಿಕೆ ಇದೆ. ಕಾಫಿ/ಟೀ ನೀಡಲಾಗುವುದಿಲ್ಲ. ಈ ಬಗ್ಗೆ ಮಾನ್ಯ ಜಿಲ್ಲಾ**ಧಿಕಾರಿ**ಗಳಿಗೆ ಪತ್ರ ಬರೆಯಲಾಗಿದೆ.
		ಬೆಳ್ತಂಗಡಿ ನಗರ ಪಂಚಾಯತ್	ಅನ್ವಯಿಸುವುದಿಲ್ಲ.
		ಪುತ್ತೂರು ನಗರ ಸಭೆ	ಪುತ್ತೂರು ನಗರಸಭೆಯಲ್ಲಿ ಇಂದಿರಾ **ಕ್ಯಾಂಟೀನ್** ನಲ್ಲಿ ಕಾಫಿ/ಟೀ ಪೂರೈಕೆ ಇರುವುದಿಲ್ಲ.
		ಸುಳ್ಯ ನಗರ ಪಂಚಾಯತ್	ಸುಳ್ಯ ನಗರ ಪಂಚಾಯತದ ಇಂದಿರಾ **ಕ್ಯಾಂಟೀನ್** ನಲ್ಲಿ ಕಾಫಿ/ಟೀ ಪೂರೈಕೆ ಇರುವುದಿಲ್ಲ.
		ಉಳ್ಳಾಲ ನಗರ ಸಭೆ	ಉಳ್ಳಾಲ ನಗರಸಭೆಯಲ್ಲಿ ಇಂದಿರಾ **ಕ್ಯಾಂಟೀನ್** ನಲ್ಲಿ ಕಾಫಿ/ಟೀ ಪೂರೈಕೆ ಇರುವುದಿಲ್ಲ.

ಯೋಜನಾ ನಿರ್ದೇಶಕರು

ಜಿಲ್ಲಾ ನಗರಭಿವೃದ್ಧಿ ಕೋಶ

ದ.ಕ.ಜಿಲ್ಲೆ,ಮಂಗಳೂರು

ಅನುಬಂಧ–1

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಚಾಲ್ತಿಯಲ್ಲಿರುವ ಇಂದಿರಾ ಕ್ಯಾಂಟೀನ್‌ಗಳ ವಿವರ

1	2	3	4	5	6
ಕ್ರ.ಸಂ	ಜಿಲ್ಲೆಯ ಹೆಸರು	ನಗರ ಸ್ಥಳೀಯ ಸಂಸ್ಥೆಯ ಹೆಸರು	ಕ್ಯಾಂಟೀನ್ ಗಳ ಸಂಖ್ಯೆ	ಇಂದಿರಾ ಕ್ಯಾಂಟೀನ್ ಇರುವ ಸ್ಥಳ	ಇಂದಿರಾ ಕ್ಯಾಂಟೀನ್ ಪ್ರಾರಂಭವಾಗಿರುವ ದಿನಾಂಕ
1	ಬಳ್ಳಾರಿ	ಬಳ್ಳಾರಿ ಮಹಾನಗರ ಪಾಲಿಕೆ	1	ಬುಡಾ ಆಫೀಸ್ ಆವರಣ	12-03-2018
			1	ಗೌಸ್ ಆಫೀಸ್ ಆವರಣ	12-03-2018
			1	ಬೆಳಗಲ್ ಕ್ರಾಸ್	12-03-2018
			1	ವಿಐಎಂ ಆವರಣ	12-03-2018
			1	ಎಪಿಎಂಸಿ ಹತ್ತಿರ	12-03-2018
		ಹೊಸಪೇಟೆ ನಗರಸಭೆ	1	ಎಪಿಎಂಸಿ ಯಾರ್ಡ್ ಹತ್ತಿರ	07-03-2018
			1	ನಗರಸಭಾ ಕಚೇರಿ ಎದುರುಗಡೆ	19-07-2018
			1	ಹಳೆ ತಾಲೂಕು ಕಚೇರಿ ಕ್ಯಾಂಪಸ್	19-07-2018
		ಸಿರುಗುಪ್ಪ ನಗರಸಭೆ	1	ಸರ್ಕಾರಿ ಬಸ್ ನಿಲ್ದಾಣದ ಹತ್ತಿರ	10-02-2019
		ಹೂವಿನಹಡಗಲಿ ಪುರಸಭೆ	1	ವಾರ್ಡ್ ನಂ.10 ಲೋಕೋಪಯೋಗಿ ಇಲಾಖೆ ಪಕ್ಕದಲ್ಲಿ	26-02-2019
		ಸಂಡೂರು ಪುರಸಭೆ	1	ವಾರ್ಡ ನಂ 1 ಬಳ್ಳಾರಿ ರಸ್ತೆ	03-02-2020
		ಕೂಡ್ಲಗಿ ಪಟ್ಟಣ ಪಂಚಾಯಿತಿ	1	ಹಳೆ ಸರ್ಕಾರಿ ಆಸ್ಪತ್ರೆ ಹತ್ತಿರ	15-02-2020
2	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ ನಗರಸಭೆ	1	ವೆಟರಿನರಿ ಆಸ್ಪತ್ರೆ ಹತ್ತಿರ	22-03-2018
		ಹೊಸಕೋಟೆ ನಗರಸಭೆ	1	ತಾಲೂಕು ಕಚೇರಿ ಕ್ಯಾಂಪಸ್	04-02-2018
		ನೆಲಮಂಗಲ ಪುರಸಭೆ	1	ಶುಭಾಸ್ ನಗರ	24-11-2018
		ದೇವನಹಳ್ಳಿ	1	ಹಳೆ ಬಸ್ ನಿಲ್ದಾಣ ಹತ್ತಿರ	09-02-2019
3	ಬೆಂಗಳೂರು ನಗರ	ಆನೇಕಲ್ ಪುರಸಭೆ	1	ಹಳೆ ತಾಲ್ಲೂಕು ಕಚೇರಿ ಕಂಪೌಡ್	19-03-2018
4	ಬೆಳಗಾವಿ	ಬೆಳಗಾವಿ ಮಹಾನಗರ ಪಾಲಿಕೆ	1	ತರಕಾರಿ ಮಾರ್ಕೆಟ್ ಹತ್ತಿರ, ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ ನಂತರ	12.03.2018
			1	ಪೈ ವೃತ್ತ	06-10-2018
			1	ಸಿವಿಲ್ ಆಸ್ಪತ್ರೆ	06-10-2018
			1	ಎಪಿಎಂಸಿ ನೆಹರುನಗರ	06-10-2018
			1	ನಂದಿನಿ ವೃತ್ತ	06-10-2018
			1	ಗೋವಿಸ್ ವೃತ್ತ	06-10-2018
		ಬೈಲಹೊಂಗಲ ಪುರಸಭೆ	1	ಸಂಗೊಳ್ಳಿರಾಯಣ್ಣ ವೃತ್ತದ ಹತ್ತಿರ	26-01-2019
		ಸವದತ್ತಿ ಪುರಸಭೆ	1	ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ ಹತ್ತಿರ	27-12-2019

5	ಬೀದರ್	ಬೀದರ್ ನಗರಸಭೆ	1	ನಗರಸಭೆ ಕಾಂಪ್ಲೆಕ್ಸ್ ಮಾಸ್ಟರ್ ಕಿಚನ್	13-03-2018
			1	ಸರ್ಕಾರಿ ಆಸ್ಪತ್ರೆ ಬೀದರ್	13-03-2018
			1	ಎಪಿಎಂಸಿ ಯಾರ್ಡ್ ಹತ್ತಿರ	13-03-2018
		ಭಾಲ್ಕಿ ಪುರಸಭೆ	1	ಸರ್ಕಾರಿ ಬಸ್ ನಿಲ್ದಾಣ ಹತ್ತಿರ	21-03-2018
		ಹುಮನಾಬಾದ್ ಪುರಸಭೆ	1	ಎ.ಪಿ.ಎಂ.ಸಿ ಯಾರ್ಡ್ ಹತ್ತಿರ	17-07-2018
		ಬಸವಕಲ್ಯಾಣ ನಗರಸಭೆ	1	ಸರ್ವೇ ನಂ :152-153	20-07-2018
6	ಬಾಗಲಕೋಟೆ	ಬಾಗಲಕೋಟೆ ನಗರಸಭೆ	1	ನವನಗರ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ ಹತ್ತಿರ	29-06-2019
			1	ಹಳೆಯ ಬಸ್ ನಿಲ್ದಾಣದ ಹತ್ತಿರ	29-06-2019
		ಬಾದಾಮಿ ಪುರಸಭೆ	1	ಬಾದಾಮಿ ಮುಖ್ಯ ರಸ್ತೆ	05-03-2019
		ಜಮಖಂಡಿ ನಗರಸಭೆ	1	ಜಮಖಂಡಿ ಬಸ್ ನಿಲ್ಧಾಣದ ಹತ್ತಿರ	03-03-2019
7	ಚಾಮರಾಜನಗರ	ಚಾಮರಾಜನಗರ ನಗರಸಭೆ	1	ಡಿ.ಸಿ. ಕಛೇರಿ ಹತ್ತಿರ	12-03-2018
		ಕೊಳ್ಳೆಗಾಲ ನಗರಸಭೆ	1	ಸರ್ಕಾರಿ ಆಸ್ಪತ್ರೆ ಎದುರುಗಡೆ	24-03-2018
		ಗುಂಡ್ಲುಪೇಟೆ ಪುರಸಭೆ	1	ಸಿರಿಕಲ್ಚರ್ ಕಛೇರಿ ಎದುರುಗಡೆ	07-12-2018
		ಯಳಂದೂರೂ ಪಟ್ಟಣ ಪಂಚಾಯಿತಿ	1	ಆಶ್ರಯ ಬಡಾವಣೆ , ಕೆ.ಕೆ ರಸ್ತೆ	09-02-2019
8	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ ನಗರಸಭೆ	1	ಚಿಕ್ಕಬಳ್ಳಾಪುರ ಟೌನ್	10-10-2018
		ಗೌರಿಬಿದನೂರು ನಗರಸಭೆ	1	ಬಿ.ಹೆಚ್ ರೆಸ್ತೆ ಹತ್ತಿರ	26-01-2019
		ಚಿಂತಾಮಣಿ ನಗರಸಭೆ	1	ಎ.ಪಿ.ಎಂ.ಸಿ ಯಾರ್ಡ್ ಹತ್ತಿರ	02-02-2019
		ಶಿಡ್ಲಘಟ್ಟ ನಗರಸಭೆ	1	ಸರ್ಕಾರಿ ಬಸ್ ನಿಲ್ದಾಣದ ಹತ್ತಿರ	11-02-2019
		ಗುಡಿಬಂಡೆ ಪಟ್ಟಣ ಪಂಚಾಯಿತಿ	1	ತಾಲ್ಲೂಕು ಕಛೇರಿ ಆವರಣದಲ್ಲಿ	17-02-2019
9	ಚಿಕ್ಕಮಗಳೂರು	ಚಿಕ್ಕಮಗಳೂರು ನಗರಸಭೆ	1	ಕೆಎಸ್ಆರ್‌ಟಿಸಿ ಬಸ್ ನಿಲ್ದಾಣ ಹತ್ತಿರ	06-12-2018
		ಕಡೂರು ಪುರಸಭೆ	1	ಸರ್ಕಾರಿ ಆಸ್ಪತ್ರೆ ಹತ್ತಿರ	06-12-2018
		ತರೀಕೆರೆ ಪುರಸಭೆ	1	ಸರ್ಕಾರಿ ಬಸ್ ನಿಲ್ದಾಣ ಹತ್ತಿರ	06-12-2018
		ಮೂಡಿಗೆರೆ ಪ.ಪಂಚಾಯತ್	1	ಪಟ್ಟಣ ಪಂಚಾಯತ್ ಹತ್ತಿರ	06-12-2018
		ಎನ್.ಆರ್ ಪುರ ಪ.ಪಂಚಾಯತ್	1	ಬಸ್ ನಿಲ್ದಾಣದ ಹತ್ತಿರ	07-12-2018
		ಕೊಪ್ಪ ಪ.ಪಂಚಾಯತ್	1	ಸರ್ಕಾರಿ ಆಸ್ಪತ್ರೆ ಹತ್ತಿರ	07-12-2018
		ಶೃಂಗೇರಿ ಪ.ಪಂಚಾಯತ್	1	ಸಂತೆ ಮೈದಾನ ಹತ್ತಿರ	07-12-2018

10	ಚಿತ್ರದುರ್ಗ	ಚಿತ್ರದುರ್ಗ ನಗರಸಭೆ	1	ಐಬಿ ಕ್ಯಾಂಪಸ್ ಹತ್ತಿರ ಅಥವಾ ಯುನಿಯನ್ ಪಂಪ್ ಹೌಸ್ ಕ್ಯಾಂಪಸ್	08-03-2018
			1	ಪಿಡಬ್ಲ್ಯೂಡಿ ಆಫೀಸ್ ಹತ್ತಿರ ಅಥವಾ ಜಿಲ್ಲಾ ಆರೋಗ್ಯ ಆಫೀಸ್ ಹತ್ತಿರ	24-03-2018
		ಹೊಸದುರ್ಗ ಪುರಸಭೆ	1	ಪುರಸಭೆ ಕಛೇರಿ ಪಕ್ಕದಲ್ಲಿ	08-12-2018
		ಚಳ್ಳಕೆರೆ ಪುರಸಭೆ	1	ಬಿ.ಇ.ಓ ಕಚೇರಿ ಆವರಣ	15-08-2019
		ಹಿರಿಯೂರು ನಗರಸಭೆ	1	ಬಸ್ ನಿಲ್ದಾಣದ ಎದುರುಗಡೆ	04-10-2019
11	ದಕ್ಷಿಣ ಕನ್ನಡ	ಮಂಗಳೂರು ಮಹಾನಗರಪಾಲಿಕೆ	1	ಉರ್ವಾ ಸ್ಟೋರ್	06-03-2018
			1	ಲೇಡಿ ಘೋಶನ್	06-03-2018
			1	ಕಾವೂರು	07-03-2018
			1	ಸುರ್ತ್ಕಲ್	07-03-2018
			1	ಪಂಪ್‌ವೆಲ್ ಆಫೀಸ್	17-07-2018
		ಉಳ್ಳಾಲ ನಗರಸಭೆ	1	ತೊಕ್ಕೊಟ್ಟು	22-03-2018
		ಬಂಟ್ವಾಳ ಪುರಸಭೆ	1	ಬಿ.ಸಿ.ರೋಡ್ ಮಿನಿ ವಿಧಾನ ಸೌಧದ ಬಳಿ	09-12-2018
		ಪುತ್ತೂರು ನಗರಸಭೆ	1	ಬಿ.ಇ.ಓ ಕಚೇರಿ ಹತ್ತಿರ	01-03-2019
		ಸುಳ್ಯ ಪುರಸಭೆ	1	ಸುಳ್ಯ ಪುರಸಭೆ	23-01-2020
12	ದಾವಣಗೆರೆ	ದಾವಣಗೆರೆ ಮಹಾನಗರಪಾಲಿಕೆ	1	ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ	22-03-2018
			1	ದುರ್ಗಾಂಬಿಕಾ ಟ್ರಸ್ಟ್, ಬುದಿಹಾಳ ರಸ್ತೆ	22-03-2018
			1	ಎಪಿಎಂಸಿ ಹತ್ತಿರ	21-03-2018
			1	ಮಂಡಕ್ಕಿ ಭಟ್ಟಿ ಲೇಔಟ್	22-03-2018
			1	ಹೈಸ್ಕೂಲ್ ಫೀಲ್ಡ್	13-03-2018
			1	ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ ಹತ್ತಿರ	21-03-2018
			1	ಲೋಕಿ ಕೆರೆ ರಸ್ತೆ, ಇಂಡಸ್ಟ್ರೀಯಲ್ ಟೌನ್ ವಾರ್ಡ್ ನಂ.41	21-03-2018
			1	ಬಾಪೂಜಿ ಆಸ್ಪತ್ರೆ ಹತ್ತಿರ	21-03-2018
		ಜಗಳೂರು ಪಟ್ಟಣ ಪಂಚಾಯಿತಿ	1	ಹಳೆಯ ಬಸ್ ನಿಲ್ದಾಣದ ಹತ್ತಿರ ಗುರುಭವನ ಆವರಣ	09-12-2018
		ಚನ್ನಗಿರಿ ಪುರಸಭೆ	1	ಸರ್ಕಾರಿ ಜುನಿಯರ್ ಕಾಲೇಜ್ ಹತ್ತಿರ	26-01-2019
		ಹರಿಹರ ನಗರಸಭೆ	1	ಮಿನಿ ವಿಧಾನ ಸೌಧದ ಹತ್ತಿರ	13-10-2019
13	ಗದಗ	ಗದಗ-ಬೇಟಗೇರಿ	1	ತರಕಾರಿ ಮಾರ್ಕೆಟ್ ಹತ್ತಿರ	05-10-2018
		ಮುಂಡರಗಿ ಪುರಸಭೆ	1	ಗದಗ ಮತ್ತು ಮುಂಡರಗಿ ಮುಖ್ಯ ರಸ್ತೆ	29-02-2020

14	ಹಾಸನ	ಹಾಸನ ನಗರಸಭೆ	1	ನಂ.23, ನಗರಸಭೆ ಕಚೇರಿ ಹತ್ತಿರ	23-03-2018
			1	ವಾರ್ಡ್ ನಂ.7 ಸರ್ಕಾರಿ ಆಸ್ಪತ್ರೆ ಹತ್ತಿರ	26-03-2018
		ಚನ್ನರಾಯಪಟ್ಟಣ ಪುರಸಭೆ	1	ಸರ್ಕಾರಿ ಆಸ್ಪತ್ರೆ ಎದುರುಗಡೆ	07-07-2018
		ಹೊಳೆನರಸೀಪುರ ಪುರಸಭೆ	1	ವೆಟರಿನರಿ ಆಸ್ಪತ್ರೆ ಹತ್ತಿರ	11-10-2018
		ಬೇಲೂರು ಪುರಸಭೆ	1	ಐಬಿ ಹಿಂಭಾಗ, ದೇವಸ್ಥಾನ ರಸ್ತೆ	02-11-2018
		ಸಕಲೇಶಪುರ ಪುರಸಭೆ	1	ಮಿನಿ ವಿದಾನಸೌಧ ಎದುರುಗಡೆ	19-11-2018
		ಅರಕಲಗೂಡು ಪಟ್ಟಣ ಪಂಚಾಯಿತಿ	1	ಶಿಕ್ಷಕರ ಭವನ ಎದುರುಗಡೆ, ಬಸ್ ನಿಲ್ದಾಣದ ಹತ್ತಿರ	26-02-2019
		ಅರಸೀಕೆರೆ ನಗರಸಭೆ	1	ತಾಲ್ಲೂಕು ಕಛೇರಿ ಆವರಣದಲ್ಲಿ	21-10-2019
15	ಹಾವೇರಿ	ಹಾವೇರಿ	1	ಪಶು ವೈದ್ಯ ಆಸ್ಪತ್ರೆ ಎದುರುಗಡೆ	26-01-2019
		ಹಿರೇಕೆರೂರು ಪಟ್ಟಣ ಪಂಚಾಯಿತಿ	1	ಮಿನಿ ವಿಧಾನ ಸೌಧದ ಹತ್ತಿರ	15-02-2020
16	ಧಾರವಾಡ	ಹುಬ್ಬಳ್ಳಿ – ಧಾರವಾಡ	1	ಸೋನಿಯಾ ಗಾಂಧಿ ನಗರ	11-09-2018
			1	ಎಸ್.ಎಂ. ಕೃಷ್ಣ ನಗರ	11-09-2018
			1	ಹೊಸ ಇಂಗ್ಲೀಷ್ ಪ್ರೌಢಶಾಲೆ	11-09-2018
			1	ಮಿನಿ ವಿಧಾನ ಸೌಧದ ಹತ್ತಿರ	16-11-2018
			1	ಹೊಸ ಬಸ್ ನಿಲ್ದಾಣ ಹತ್ತಿರ	16-11-2018
			1	ಹುಬ್ಬಳ್ಳಿಯ ಉಣಕಲ್ ಕೆರೆ	17-11-2018
			1	ಕಿಮ್ಸ್ ಆಸ್ಪತ್ರೆ ಹತ್ತಿರ	17-11-2018
			1	ಬೆಂಗೇರಿ ಸಂತೆ ಮೈದಾನದ ಹತ್ತಿರ	17-11-2018
			1	ಹೊಸ ಬಸ್ ನಿಲ್ದಾಣ ಹತ್ತಿರ ಹುಬ್ಬಳ್ಳಿ	17-11-2018
17	ಕಲಬುರಗಿ	ಕಲಬುರಗಿ ಮಹಾನಗರಪಾಲಿಕೆ	1	ಪಾಲಿಕೆ ಆವರಣ	10-02-2018
			1	ಸೆಂಟ್ರಲ್ ಬಸ್ ನಿಲ್ದಾಣ	28-02-2018
			1	ಸೂಪರ್ ಮಾರ್ಕೆಟ್	28-02-2018
			1	ಜಿಮ್ಸ್ ಆಸ್ಪತ್ರೆ	08-03-2018
			1	ಹಳೆ ಇನ್‌ಸ್ಪೆಕ್ಷನ್ ಬಂಗ್ಲೋ	21-03-2018
			1	ಎ.ಪಿ.ಎಂ.ಸಿ ಯಾರ್ಡ್	21-03-2018
			1	ಆಳಂದ ಚೆಕ್‌ಪೋಸ್ಟ್	22-03-2018
		ಚಿತ್ತಾಪುರ ಪುರಸಭೆ	1	ಎ.ಪಿ.ಎಂ.ಸಿ ಯಾರ್ಡ್ ಹತ್ತಿರ	01-03-2019
		ಚಿಂಚೋಳಿ ಪುರಸಭೇ	1	ಸರ್ಕಾರಿ ಬಸ್ ನಿಲ್ದಾಣದ ಹತ್ತಿರ	02-10-2019
18	ಕೊಡಗು	ಮಡಿಕೇರಿ ನಗರಸಭೆ	1	ಹೊಸ ಖಾಸಗಿ ಬಸ್ ನಿಲ್ದಾಣ ಹತ್ತಿರ	22-03-2018
		ವಿರಾಜಪೇಟೆ ಪಟ್ಟಣ ಪಂಚಾಯಿತಿ	1	ಸರ್ಕಾರಿ ಬಸ್ ನಿಲ್ದಾಣದ ಹತ್ತಿರ	18-12-2019
		ಬಂಗಾರಪೇಟೆ	1	ಪಟ್ಟಾಭಿಷೇಕ ಉದ್ಯಾನವನ ಕೋಲಾರ ಮುಖ್ಯ ರಸ್ತೆ	22-09-2018

19	ಕೋಲಾರ	ಶ್ರೀನಿವಾಸಪುರ ಪುರಸಭೆ	1	ಪಿಡಬ್ಲ್ಯೂಡಿ ಕಛೇರಿ ಕೋಲಾರ	22-11-2018
		ಕೋಲಾರ ನಗರಸಭೆ	1	ಹಳೇ ಬಸ್ ನಿಲ್ದಾಣದ ಹತ್ತಿರ	05-03-2019
20	ಕೊಪ್ಪಳ	ಕೊಪ್ಪಳ ನಗರಸಭೆ	1	ಪ್ರೈಮರಿ ಕಛೇರಿ	31-10-2018
		ಯಲಬುರ್ಗ ಪಟ್ಟಣ ಪಂಚಾಯಿತಿ	1	ಜಿಲ್ಲಾ ಪಂಚಾಯಿತಿ ಕಛೇರಿ ಹತ್ತಿರ ಸರ್ಕಾರಿ ಬಸ್ ನಿಲ್ದಾಣದಲ್ಲಿ	04-10-2019
21	ಮಂಡ್ಯ	ಮಂಡ್ಯ ನಗರಸಭೆ	1	ಸಂಜಯ್ ವೃತ್ತ	12-03-2018
			1	ನಂದಾ ವೃತ್ತ	12-03-2018
		ಮಳವಳ್ಳಿ ಪುರಸಭೆ	1	ಕೊಳ್ಳೇಗಾಲ ಮುಖ್ಯ ರಸ್ತೆ, ಜನರಲ್ ಆಸ್ಪತ್ರೆ ಮುಂದೆ	27-03-2018
		ಮದ್ದೂರು ಪುರಸಭೆ	1	ಹಳೇ ಬಸ್ ನಿಲ್ದಾಣದ ಹತ್ತಿರ	07-01-2019
		ಪಾಂಡವಪುರ ಪುರಸಭೆ	1	.ಸಂತೆ ಮೈದಾನದ ಹತ್ತಿರ	11-01-2019
		ಶ್ರೀರಂಗಪಟ್ಟಣ ಪುರಸಭೆ	1	ಸಿವಿಲ್ ಬಸ್ ನಿಲ್ದಾಣ ಹತ್ತಿರ	04-02-2019
22	ಮೈಸೂರು	ಮೈಸೂರು ಮಹಾನಗರಪಾಲಿಕೆ	1	ಕಾಡಾ ಕಛೇರಿ ಆವರಣ	12-01-2018
			1	ಸಿವೇಜ್ ಫಾರ್ಮ್ ವಿದ್ಯಾರಣ್ಯಪುರ	12-01-2018
			1	ಸಿಲ್ಕ್ ಫಾಕ್ಟ್ರಿ ವೃತ್ತ ಅಶೋಕಪುರಂ	12-01-2018
			1	ಶಾರದಾದೇವಿ ನಗರ	12-01-2018
			1	ಕುಂಬಾರಕೊಪ್ಪಲು ಮುಖ್ಯ ರಸ್ತೆ	12-01-2018
			1	ಕೆ.ಆರ್ ಆಸ್ಪತೆ ಆವರಣ	12-01-2018
			1	ಜೋಡಿ ತೆಂಗಿನಮರ ರಸ್ತೆ	12-01-2018
			1	ಅಜೀಜ್ ಸೇಟ್ ಡಬಲ್ ರಸ್ತೆ	12-01-2018
			1	ತ್ರಿವೇಣಿ ವೃತ್ತ	12-01-2018
			1	ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ ಎದುರುಗಡೆ	12-01-2018
			1	ಆಳನಹಳ್ಳಿ ವೃತ್ತ	12-01-2018
		ಟಿ. ನರಸೀಪುರ ಪುರಸಭೆ	1	ತರಕಾರಿ ಮಾರ್ಕೆಟ್ ಹತ್ತಿರ	28-11-2018
		ನಂಜನಗೂಡು ಪುರಸಭೆ	1	ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ ಹತ್ತಿರ	28-11-2018
		ಹೆಚ್.ಡಿ ಕೋಟೆ	1	ಹೆಚ್.ಡಿ ಕೋಟೆ, ಬಾಪೂಜಿ ವೃತ್ತದಲ್ಲಿ	01-05-2019
		ಕೃಷ್ಣರಾಜ ನಗರ	1	ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ, ರೇಡಿಯೋ ಮೈದಾನ ಹತ್ತಿರ	19-06-2019

23	ರಾಯಚೂರು	ರಾಯಚೂರು ನಗರಸಭೆ	1	ರೈಲ್ವೆ ನಿಲ್ದಾಣದ ಹತ್ತಿರ	27-02-2018
			1	ಬಸ್ ನಿಲ್ದಾಣದ ಹತ್ತಿರ	07-03-2018
			1	ಎ.ಪಿ.ಎಂ.ಸಿ ಯಾರ್ಡ್	23-07-2018
		ಮಾನ್ವಿ ಪುರಸಭೆ	1	ಕೃಷಿ ಇಲಾಖೆ ಆವರಣದಲ್ಲಿ	27-01-2019
		ಸಿಂಧನೂರು ಪುರಸಭೆ	1	ಕುಷ್ಟಗಿ ರಸ್ತೆ	05-01-2019
		ಲಿಂಗಸಗೂರು ಪುರಸಭೆ	1	ಬಸ್ ನಿಲ್ದಾಣದ ಹತ್ತಿರ	27-02-2019
24	ರಾಮನಗರ	ರಾಮನಗರ ನಗರಸಭೆ	1	ಆರೋಗ್ಯ ಇಲಾಖೆ ಪ್ರಿಮೈಸಿಸ್ ಹತ್ತಿರ	26-03-2018
		ಕನಕಪುರ ನಗರಸಭೆ	1	ನಗರಸಭೆ ಕಚೇರಿ ಹಿಂಭಾಗ ವಾರ್ಡ್ ನಂ. 5	23-08-2018
		ಚನ್ನಪಟ್ಟಣ ನಗರಸಭೆ	1	ಜನರಲ್ ಆಸ್ಪತ್ರೆ ಹತ್ತಿರ	08-12-2018
		ಮಾಗಡಿ ಪುರಸಭೆ	1	ಪುರಸಭೆ ಕಛೇರಿ ಪಕ್ಕದಲ್ಲಿ	11-01-2019
25	ಶಿವಮೊಗ್ಗ	ಶಿವಮೊಗ್ಗ ಮಹಾನಗರಪಾಲಿಕೆ	1	ಶಿವಾಲಯ ದೇವಸ್ಥಾನದ ಹತ್ತಿರ, ವಿನೋಬಾ ನಗರ	13-03-2018
			1	ಡಿಡಿಪಿಐ ಖಾಸಗಿ ಕಛೇರಿ ಹತ್ತಿರ	15-09-2018
			1	ಖಾಸಗಿ ಬಸ್ ನಿಲ್ದಾಣದ ಹಿಂಭಾಗ	15-09-2018
			1	ಎಪಿಎಂಸಿ ಯಾರ್ಡ್	15-09-2018
		ಭದ್ರಾವತಿ ನಗರಸಭೆ	1	ಬಸ್ ನಿಲ್ದಾಣದ ಹತ್ತಿರ	02-10-2019
			1	ಸಂತೆ ಮೈದಾನ ಹತ್ತಿರ	02-10-2019
26	ತುಮಕೂರು	ತುಮಕೂರು ಮಹಾನಗರಪಾಲಿಕೆ	1	ಕನಕ ವೃತ್ತ	25-02-2018
			1	ತುಮಕೂರು ಮಹಾನಗರಪಾಲಿಕೆ ಆವರಣ	25-02-2018
			1	ಜೆ.ಸಿ ರಸ್ತೆ, ತುಮಕೂರು ಮಹಾನಗರಪಾಲಿಕೆ ಆವರಣ	25-02-2018
			1	ಕ್ಯಾತಸಂದ್ರ ವೃತ್ತ	25-02-2018
		ತಿಪಟೂರು ನಗರಸಭೆ	1	ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ ಹತ್ತಿರ	05-04-2018
		ಶಿರಾ ನಗರಸಭೆ	1	ಸರ್ಕಾರಿ ಆಸ್ಪತ್ರೆ ಎದುರುಗಡೆ	28-12-2017
		ಚಿಕ್ಕನಾಯಕನಹಳ್ಳಿ ಪುರಸಭೆ	1	ಎಸ್‌ಬಿಎಂ ಬ್ಯಾಂಕ್ ಪಕ್ಕ	15-03-2018
		ಮಧುಗಿರಿ ಪುರಸಭೆ	1	ಸಹಾಯಕ ಆಯುಕ್ತರ ಕಛೇರಿ ಹತ್ತಿರ	19-03-2018
		ಕೊರಟಗೆರೆ ಪ.ಪಂಚಾಯತ್	1	ತಾಲೂಕು ಕಛೇರಿ ಕ್ಯಾಂಪಸ್	11-04-2018
		ಗುಬ್ಬಿ ಪಟ್ಟಣ ಪಂಚಾಯಿತಿ	1	ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ ಹಿಂದುಗಡೆ	02-07-2019
		ಪಾವಗಡ ಪುರಸಭೆ	1	ಹಳೆ ಸಂತೆ ಮೈದಾನ ಪಾವಗಡ	22-09-2018
		ಕುಣಿಗಲ್ ಪುರಸಭೆ	1	ತಾಲ್ಲೂಕು ಕಛೇರಿ ಆವರಣದಲ್ಲಿ, ಪೋಲೀಸ್ ಸ್ಟೇಷನ್ ಎದುರುಗಡೆ	03-08-2019
			1	ಮಣಿಪಾಲ ಹತ್ತಿರ	27-02-2018

27	ಉಡುಪಿ	ಉಡುಪಿ ನಗರಸಭೆ	1	ಹಳೆ ತಾಲ್ಲೂಕು ಕಛೇರಿ ಆವರಣ	22-03-2018
		ಕಾರ್ಕಳ ಪುರಸಭೆ	1	ಬಂಡಿಮಠ ಬಸ್ ನಿಲ್ದಾಣದ ಹತ್ತಿರ	21-11-2018
		ಕುಂದಾಪುರ ಪುರಸಭೆ	1	ಶಾಸ್ತ್ರಿ ವೃತ್ತದ ಹತ್ತಿರ, ಕುಂದಾಪುರ	21-11-2018
28	ಉತ್ತರ ಕನ್ನಡ	ಹಳಿಯಾಳ ಪುರಸಭೆ	1	ಮಾರುತಿಹಳ್ಳಿ ನಗರ, ಹಳಿಯಾಳ ಪುರಸಭೆ ಕಛೇರಿ ಹತ್ತಿರ ಅಥವಾ ಪಿಡಬ್ಲ್ಯೂಡಿ ಕಛೇರಿ ಹತ್ತಿರ	14-03-2018
		ದಾಂಡೇಲಿ ನಗರಸಭೆ	1	ಪಟೇಲ್ ವೃತ್ತ	06-08-2018
29	ವಿಜಯಪುರ	ವಿಜಯಪುರ ಮಹಾನಗರಪಾಲಿಕೆ	1	ಮುನಿಸಿಪಲ್ ಕಛೇರಿ ಹತ್ತಿರ	07-12-2018
			1	ಎ.ಪಿ.ಎಂ.ಸಿ ಯಾರ್ಡ್ ಹತ್ತಿರ	07-12-2018
			1	ಐ.ಟಿ.ಐ ಕಾಲೇಜು ಹತ್ತಿರ	07-12-2018
			1	ಗೋದಾವರಿ ಹೋಟೆಲ್ ಹತ್ತಿರ	07-12-2018
		ಬಸವನಬಾಗೇವಾಡಿ ಪುರಸಭೆ	1	ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ ಹತ್ತಿರ	02-02-2019
		ಇಂಡಿ ಪುರಸಭೆ	1	ಮಿನಿ ವಿಧಾನಸೌಧ ಆವರಣದಲ್ಲಿ	29-09-2019
30	ಯಾದಗಿರಿ	ಯಾದಗಿರಿ ನಗರಸಭೆ	1	ಬಸವೇಶ್ವರ ವೃತ್ತ ಹತ್ತಿರ	13-07-2018
	ಒಟ್ಟಾರೆ		175		

5/03/2020.

Chief Project Officer
Directorate of Municipal Administration

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

[illegible]
E-mail : [illegible]@gmail.com
Website : www.municipaladmn.gov.in
[illegible]

ಸಂಖ್ಯೆ: 21878 [illegible] ಪಿಎಂಎಸ್ [illegible] ದಿನಾಂಕ:20-06-2019

ರವರಿಗೆ,
ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.

ಮಾನ್ಯರೆ,

ವಿಷಯ : "ಇಂದಿರಾ ಕ್ಯಾಂಟೀನ್" [illegible] ಅನುಷ್ಠಾನಗೊಳಿಸುವ ಬಗ್ಗೆ

ಉಲ್ಲೇಖ : 1) ಸರ್ಕಾರದ ಆದೇಶ ಸಂಖ್ಯೆ [illegible] ದಿ:2[illegible]-10-2017
2) ದಿ:04-06-2019ರಂದು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ "ಇಂದಿರಾ ಕ್ಯಾಂಟೀನ್" ಯೋಜನೆ ಪ್ರಗತಿ ಪರಿಶೀಲನಾ ಸಭೆ

ಸರ್ಕಾರದ ಉಲ್ಲೇಖ (1)ರ ಆದೇಶದನ್ವಯ ರಾಜ್ಯದ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳ 173 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ "ಇಂದಿರಾ ಕ್ಯಾಂಟೀನ್" ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ.

ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ "ಇಂದಿರಾ ಕ್ಯಾಂಟೀನ್" ಯೋಜನೆಯ ಪ್ರಗತಿ ಪರಿಶೀಲನಾ ಸಭೆಯನ್ನು ಉಲ್ಲೇಖ (2)ರ [illegible] ಕೈಗೊಳ್ಳಲಾಗಿರುತ್ತದೆ. ಸದರಿ ಸಭೆಯಲ್ಲಿ ಇಂದಿರಾ ಕ್ಯಾಂಟೀನ್ ನಿರ್ಮಾಣ ಸಂಸ್ಥೆ, ಅಡುಗೆ [illegible] ಸರಬರಾಜುದಾರರು ಹಾಗೂ ಆಹಾರ ಸರಬರಾಜುದಾರರೊಂದಿಗೆ ಯೋಜನೆಯ ಯಶಸ್ವಿ ಅನುಷ್ಠಾನದ ಕುರಿತು ಹಲವು ವಿಷಯಗಳನ್ನು ಚರ್ಚಿಸಲಾಗಿ ಈ ಕೆಳಕಂಡ ನಿರ್ದೇಶನಗಳನ್ನು ಕಡ್ಡಾಯವಾಗಿ [illegible] ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಸೂಚಿಸಿರುತ್ತಾರೆ.

1) ಜಿಲ್ಲಾಧಿಕಾರಿಗಳು ಸ್ಥಳೀಯ ಬೇಡಿಕೆಗೆ [illegible] ಅಥವಾ ರಾತ್ರಿ [illegible] ಆಹಾರ ಒದಗಿಸಬೇಕಾದ [illegible] ಸಂಖ್ಯೆಯನ್ನು [illegible] ಕ್ಯಾಂಟೀನ್‌ಗೆ ನಿಗದಿಪಡಿಸಲಾಗಿರುವ ಸಂಖ್ಯೆಯನ್ನು [illegible] ಉಲ್ಲೇಖ(1)ರ ಆದೇಶದ [illegible] "ಇಂದಿರಾ ಕ್ಯಾಂಟೀನ್ ಅನುಷ್ಠಾನ, ಕಾರ್ಯನಿರ್ವಹಣೆ ಹಾಗೂ ಮೇಲ್ವಿಚಾರಣೆ ಸಮಿತಿ" ಸಭೆಯಲ್ಲಿ ತೀರ್ಮಾನ [illegible] ಕೈಗೊಂಡು ಆಹಾರದ ಇಂಡೆಂಟ್ [illegible]
2) "ಇಂದಿರಾ ಕ್ಯಾಂಟೀನ್"ಗಳಲ್ಲಿ ಪ್ರಸ್ತುತ ಆಹಾರ ಸರಬರಾಜುದಾರರಿಂದ ಬಳಸಲ್ಪಡುವ ನೀರಿಗೆ ಸಂಬಂಧಿಸಿದಂತೆ [illegible] ತೆರಿಗೆ [illegible] ದಿ: 01-[illegible]-2019ರಿಂದ ಅನ್ವಯವಾಗುವಂತೆ [illegible] ಬಳಕೆ ಶುಲ್ಕವನ್ನು [illegible] ತೆರಿಗೆಯನ್ನು ಸಂಗ್ರಹಿಸಲು ಕ್ರಮವಹಿಸುವುದು.
3) ಇಂದಿರಾ ಕ್ಯಾಂಟೀನ್ /ಮಾಸ್ಟರ್ ಅಡುಗೆ ಕೋಣೆಗಳಲ್ಲಿ [illegible] ಉತ್ಪತ್ತಿಯಾಗುವ [illegible] ತ್ಯಾಜ್ಯವನ್ನು ವಿಲೇವಾರಿ ಮಾಡಲು [illegible] ಬಳಕೆಗೆ [illegible] ಮಾಡಲು ಸಹಕಾರಿಯಾಗುವ ತ್ಯಾಜ್ಯ [illegible] ಬಯೋಗ್ಯಾಸ್ ಸ್ಥಾವರವನ್ನು ಮುನ್ಸಿಪಲ್ ನಿಧಿ/ಎಸ್.ಎಫ್.ಸಿ ಮುಕ್ತನಿಧಿ/14ನೇ ಹಣಕಾಸು ಆಯೋಗದ ಅನುದಾನದಡಿ ಖರೀದಿಸಿ, ಅನುಷ್ಠಾನಗೊಳಿಸುವುದು. [illegible] ನಿರ್ವಹಣೆಯನ್ನು ಆಹಾರ ಸರಬರಾಜುದಾರರ ಜವಾಬ್ದಾರಿಗೆ [illegible] ನಗರ ಸ್ಥಳೀಯ ಸಂಸ್ಥೆ ವತಿಯಿಂದ ನಿರ್ವಹಿಸುವುದು. [illegible] ಕ್ಯಾಂಟೀನ್ [illegible] ಬಳಕೆ ಮಾಡಿಕೊಳ್ಳಬಹುದಾಗಿದೆ.
4) ಇಂದಿರಾ ಕ್ಯಾಂಟೀನ್ / ಮಾಸ್ಟರ್ ಅಡುಗೆ ಕೋಣೆಗಳಲ್ಲಿ ಉತ್ಪತ್ತಿಯಾಗುವ ಕೊಳಚೆ ನೀರು/ದ್ರವ ತ್ಯಾಜ್ಯವನ್ನು ಅವಶ್ಯಕತೆಯ ಮೇರೆಗೆ ಯು.ಜಿ.ಡಿ [illegible] ಸೇವೆ ಮೂಲಕ ವಿಲೇವಾರಿ ಮಾಡಲು ಕ್ರಮವಹಿಸುವುದು ಹಾಗೂ [illegible] ನಿರ್ವಹಣೆಯ ಜವಾಬ್ದಾರಿಯನ್ನು ನಗರ ಸ್ಥಳೀಯ ಸಂಸ್ಥೆ ವತಿಯಿಂದ ನಿರ್ವಹಿಸುವುದು.

5) ನೀರಿನ ಗಡಸುತನದಿಂದ ಉಪಕರಣಗಳಾದ ಸ್ಟೀಮ್ ಜನರೇಟರ್ ಹಾಗೂ ಆರ್.ಓ. ಯಂತ್ರ ಇತ್ಯಾದಿಗಳು ಹಾಳಾಗುತ್ತಿರುವುದರಿಂದ ಸ್ಥಳೀಯ ಸಂಸ್ಥೆಗಳು ಮುನ್ಸಿಪಲ್ ನಿಧಿಯಡಿ ನೀರು ಮೃದುಗೊಳಿಸುವಿಕೆ ಯಂತ್ರ (water softener) ಗಳನ್ನು ನಿಯಮಾನುಸಾರ ಖರೀದಿಸಿ 15 ದಿನಗಳೊಳಗಾಗಿ ಕಡ್ಡಾಯವಾಗಿ ಅಳವಡಿಸಬೇಕು. ಆಯಾ ಜಿಲ್ಲಾ ನಗರಾಭಿವೃದ್ಧಿ ಕೋಶಗಳ ಕಾರ್ಯಪಾಲಕ ಅಭಿಯಂತರರು ಸ್ಥಳೀಯ ಸಂಸ್ಥೆಯವರು ನೀರು ಮೃದುಗೊಳಿಸುವಿಕೆ ಯಂತ್ರ (water softener) ಗಳನ್ನು "ಇಂದಿರಾ ಕ್ಯಾಂಟೀನ್"ಗಳಲ್ಲಿ ಅಳವಡಿಸಿರುವ ಕುರಿತು ಖಾತ್ರಿ ಪಡಿಸಿಕೊಳ್ಳಬೇಕು.

6) "ಇಂದಿರಾ ಕ್ಯಾಂಟೀನ್"ಗಳಲ್ಲಿ ಬಳಸಲ್ಪಡುವ ಎಲ್ಲಾ ವಿದ್ಯುತ್ ಉಪಕರಣಗಳ ಸುರಕ್ಷತಾ ದೃಷ್ಟಿಯಿಂದ ಸ್ಥಳೀಯ ಸಂಸ್ಥೆಗಳು ಮುನ್ಸಿಪಲ್ ನಿಧಿಯಡಿ ಸ್ಟೆಬ್ಲೈಜರ್ (stabilizer) ಗಳನ್ನು ಖರೀದಿಸಿ 15 ದಿನಗಳೊಳಗಾಗಿ ಅಳವಡಿಸಲು ಕಡ್ಡಾಯವಾಗಿ ಸೂಕ್ತ ಕ್ರಮ ವಹಿಸತಕ್ಕದ್ದು. ಆಯಾ ಜಿಲ್ಲಾ ನಗರಾಭಿವೃದ್ಧಿ ಕೋಶಗಳ ಕಾರ್ಯಪಾಲಕ ಅಭಿಯಂತರರು ಸ್ಥಳೀಯ ಸಂಸ್ಥೆಯವರು ಈ ಕುರಿತು ಖಾತ್ರಿ ಪಡಿಸಿಕೊಳ್ಳಬೇಕು.

7) ಆಯಾ ಜಿಲ್ಲೆಗಳ ನಗರಾಭಿವೃದ್ಧಿ ಕೋಶದ ಯೋಜನಾ ಅಧಿಕಾರಿಗಳು ಕನಿಷ್ಠ 30 ದಿನಗಳಿಗೊಮ್ಮೆ ಇಂದಿರಾ ಕ್ಯಾಂಟೀನ್‌ಗಳಿಗೆ ಭೇಟಿ ನೀಡಿ ಕ್ಯಾಂಟೀನ್‌ನ ಸ್ವಚ್ಛತೆ ಕಾಪಾಡಿಕೊಳ್ಳುವಿಕೆ, ಸಾರ್ವಜನಿಕರಿಗೆ ನೀಡಲಾಗುವ ಆಹಾರದ ಪ್ರಮಾಣ, ಆಹಾರದ ಗುಣಮಟ್ಟ ಹಾಗೂ ರುಚಿ, ಸಂಪ್ ಹಾಗೂ ಓವರ್‌ಹೆಡ್ ಟ್ಯಾಂಕ್‌ಗಳ ಸ್ವಚ್ಛತೆ ನಿರ್ವಹಣೆ, ಉಪಕರಣಗಳ ಬಳಕೆ ಇತ್ಯಾದಿಗಳನ್ನು ಪರಿಶೀಲಿಸಿ ಯೋಜನಾ ನಿರ್ದೇಶಕರಿಗೆ ವರದಿ ಸಲ್ಲಿಸುವುದು.

8) ಮಹಾನಗರ ಪಾಲಿಕೆಗಳ ಜಂಟಿ ಆಯುಕ್ತರು/ಉಪ ಆಯುಕ್ತರು, ಪೌರಾಯುಕ್ತರು/ಮುಖ್ಯಾಧಿಕಾರಿ ರವರು ತಮ್ಮ ಸ್ಥಳೀಯ ಸಂಸ್ಥೆ ವ್ಯಾಪ್ತಿಯಲ್ಲಿರುವ ಇಂದಿರಾ ಕ್ಯಾಂಟೀನ್‌ಗಳಿಗೆ ಕಡ್ಡಾಯವಾಗಿ ಕನಿಷ್ಠ 15 ದಿನಗಳಿಗೊಮ್ಮೆ ಭೇಟಿ ನೀಡಿ ಕ್ಯಾಂಟೀನ್‌ನ ಸ್ವಚ್ಛತೆ ಕಾಪಾಡಿಕೊಳ್ಳುವಿಕೆ, ಸಾರ್ವಜನಿಕರಿಗೆ ನೀಡಲಾಗುವ ಆಹಾರದ ಪ್ರಮಾಣ, ಆಹಾರದ ಗುಣಮಟ್ಟ ಹಾಗೂ ರುಚಿ, ಸಂಪ್ ಹಾಗೂ ಓವರ್‌ಹೆಡ್ ಟ್ಯಾಂಕ್‌ಗಳ ಸ್ವಚ್ಛತೆ ನಿರ್ವಹಣೆ, ಉಪಕರಣಗಳ ಬಳಕೆ ಇತ್ಯಾದಿಗಳನ್ನು ಪರಿಶೀಲಿಸಿ ಲೋಪಗಳು ಕಂಡುಬಂದಲ್ಲಿ ಆಹಾರ ಸರಬರಾಜುದಾರರಿಗೆ ಎಲ್ಲಾ ಅಗತ್ಯ ಸೂಚನೆ/ನಿರ್ದೇಶನಗಳನ್ನು ನೀಡಬೇಕು ಹಾಗೂ ಲೋಪಗಳ ಸರಿಪಡಿಸುವಿಕೆ ಕಾರ್ಯವನ್ನು ಖಾತ್ರಿಪಡಿಸಿಕೊಳ್ಳಬೇಕು ಹಾಗೂ ಸ್ಥಳ ಪರಿಶೀಲನಾ ವರದಿಯನ್ನು ಯೋಜನಾ ನಿರ್ದೇಶಕರ ಮುಖಾಂತರ ನಿರ್ದೇಶನಾಲಯಕ್ಕೆ ವರದಿ ಸಲ್ಲಿಸತಕ್ಕದ್ದು. ಯೋಜನಾ ನಿರ್ದೇಶಕರು ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರು ಸದರಿ ಕಾರ್ಯಗಳನ್ನು ಕಡ್ಡಾಯವಾಗಿ ನಿರ್ವಹಿಸುತ್ತಿರುವರೆ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಬೇಕು.

ಈ ಮೇಲೆ ತಿಳಿಯಪಡಿಸಿದ ನಿರ್ದೇಶನಗಳನ್ನು ಪಾಲಿಸಲು ತಮ್ಮ ಜಿಲ್ಲಾ ವ್ಯಾಪ್ತಿಯ ನಗರಾಭಿವೃದ್ಧಿ ಕೋಶ ಮತ್ತು ಸ್ಥಳೀಯ ಸಂಸ್ಥೆಯ ಅಧಿಕಾರಿಗಳಿಗೆ ಸೂಚಿಸಲು ಹಾಗೂ ಈ ಮೇಲಿನ ನಿರ್ದೇಶನಗಳನ್ನು ಪಾಲಿಸಲು ವಿಫಲರಾಗುವ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲು ನಿರ್ದೇಶನಾಲಯಕ್ಕೆ ಶಿಫಾರಸ್ಸು ಮಾಡಲು ಕೋರಿದೆ.

ತಮ್ಮ ವಿಶ್ವಾಸಿ

ನಿರ್ದೇಶಕರು
ಪೌರಾಡಳಿತ ನಿರ್ದೇಶನಾಲಯ

ಪ್ರತಿಯನ್ನು:

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ ರವರ ಅವಗಾಹನೆಗಾಗಿ.
2) ಎಲ್ಲಾ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ ರವರ ಸೂಕ್ತ ಕ್ರಮಕ್ಕಾಗಿ.
3) ಎಲ್ಲಾ ಆಯುಕ್ತರು/ಪೌರಾಯುಕ್ತರು/ಮುಖ್ಯಾಧಿಕಾರಿ, ಮಹಾನಗರ ಪಾಲಿಕೆ/ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿ ರವರ ಸೂಕ್ತ ಕ್ರಮಕ್ಕಾಗಿ.
4) ಕಛೇರಿ ಪ್ರತಿ.

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ: 080-22867172 / 22866302
ಫ್ಯಾಕ್ಸ್: 080-22863576 / 22861665
Email: dmablrdo@gmail.com
Website: www.municipaladmn.gov.in

9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು 560001.

ಸಂಖ್ಯೆ:23978 DMA 66 TMISC 2017-18

ದಿನಾಂಕ: 07-04-2018

ರವರಿಗೆ,

ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು,

ಮಾನ್ಯರೆ,

ವಿಷಯ: ಇಂದಿರಾ ಕ್ಯಾಂಟೀನ್‌ಗಳಲ್ಲಿ ಆಹಾರವನ್ನು ತಯಾರಿಸಿ ಸರಬರಾಜು ಮಾಡಿರುವ ಬಿಲ್ಲು ಪಾವತಿಸುವ ಪ್ರಕ್ರಿಯೆ ಬಗ್ಗೆ.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ: ನಅಇ 301 ಎಸ್‌ಎಫ್‌ಸಿ 2017 ದಿನಾಂಕ: 23-10-2017, 29-11-2017 ಹಾಗೂ 29-12-2017.
2) ಈ ಕಛೇರಿ ಸಮಸಂಖ್ಯೆ ಪತ್ರದ ದಿನಾಂಕ: 24-11-2017.
3) ಇಂದಿರಾ ಕ್ಯಾಂಟೀನ್ ಯೋಜನೆ ಅನುಷ್ಠಾನ ಕುರಿತು ದಿನಾಂಕ: 15-03-2018ರಂದು ನಡೆದ ರಾಜ್ಯ ಮಟ್ಟದ ಸಮಿತಿ ಸಭಾ ನಡಾವಳಿ.

ಸರ್ಕಾರವು ಉಲ್ಲೇಖ(1)ರ ಆದೇಶದಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಕೈಗೆಟುಕುವ ದರದಲ್ಲಿ ಅಂದರೆ 5 ರೂಪಾಯಿಗೆ ಬೆಳಗಿನ ಉಪಹಾರ ಮತ್ತು 10 ರೂಪಾಯಿಗೆ ಮಧ್ಯಾಹ್ನ ಮತ್ತು ಸಂಜೆಯ ಊಟಗಳನ್ನು ಒದಗಿಸಲು 173 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ 247 ಇಂದಿರಾ ಕ್ಯಾಂಟೀನ್‌ಗಳನ್ನು ಹಾಗೂ 15 ಸಾಮಾನ್ಯ ಅಡುಗೆ ಕೋಣೆಗಳನ್ನು ಪ್ರಾರಂಭಿಸಲು ಅನುಮೋದನೆ ನೀಡಲಾಗಿರುತ್ತದೆ.

ಅದರಂತೆ ಈ ಕಛೇರಿ ವತಿಯಿಂದ ಇಂದಿರಾ ಕ್ಯಾಂಟೀನ್ ಕಟ್ಟಡ ನಿರ್ಮಾಣ ಹಾಗೂ ಅಡುಗೆ ಕೋಣೆ ಮತ್ತು ಕ್ಯಾಂಟೀನ್‌ಗಳಿಗೆ ಅಡುಗೆ ಸಲಕರಣೆಗಳನ್ನು ಸರಬರಾಜು ಮಾಡಿ ಅಳವಡಿಸಲು ಕಾರ್ಯಾದೇಶ ನೀಡಲಾಗಿರುತ್ತದೆ. ಸದರಿ ಕ್ಯಾಂಟೀನ್‌ಗಳಲ್ಲಿ ಆಹಾರ ಉತ್ಪಾದಿಸುವ ಸಂಬಂಧ ಆಹಾರ ಸರಬರಾಜುದಾರರ ಆಯ್ಕೆ ಕುರಿತು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಜಿಲ್ಲಾವಾರು ಟೆಂಡರ್ ಕರೆದು ಅಂತಿಮಗೊಳಿಸಲು ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಉಲ್ಲೇಖ(2)ರ ಪತ್ರದಲ್ಲಿ ಅನುಮೋದನೆ ನೀಡಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಇಂದಿರಾ ಕ್ಯಾಂಟೀನ್ ಮತ್ತು ಅಡುಗೆ ಕೋಣೆಗಳಲ್ಲಿ ಆಹಾರ ತಯಾರಿಸಿ ಸರಬರಾಜು ಮಾಡುವ ಆಹಾರ ಸರಬರಾಜುದಾರರು ಬಿಲ್ಲನ್ನು ಸಲ್ಲಿಸುವ ಬಗ್ಗೆ ಈ ಕಛೇರಿ ವತಿಯಿಂದ ಕರಡು ಬಿಲ್ಲು ವಿಧಾನ/ಪ್ರಕ್ರಿಯೆಯನ್ನು ಸಿದ್ಧಪಡಿಸಿ ಉಲ್ಲೇಖ(3)ರಂತೆ ದಿನಾಂಕ: 15-03-2018ರಂದು ನಡೆದ ಇಂದಿರಾ ಕ್ಯಾಂಟೀನ್ ಯೋಜನೆ ಅನುಷ್ಠಾನದ ರಾಜ್ಯ ಮಟ್ಟದ ಸಮಿತಿ ಸಭೆಯಲ್ಲಿ ಸಮಿತಿ ಸದಸ್ಯರು ಹಾಗೂ ಆಹಾರ ಸರಬರಾಜು ಸಂಸ್ಥೆಗಳ ಉಪಸ್ಥಿತಿಯಲ್ಲಿ ಕರಡು ಬಿಲ್ಲು ಪ್ರಕ್ರಿಯೆಯನ್ನು ಅನುಮೋದನೆಗೆ ಮಂಡಿಸಲಾಗಿರುತ್ತದೆ. ಈ ಸಂಬಂಧ ಯಾವುದೇ ಸಲಹೆ, ಅಭಿಪ್ರಾಯ ಅಥವಾ ಮಾರ್ಪಾಡು ಇದ್ದ ಪಕ್ಷದಲ್ಲಿ ದಿನಾಂಕ: 17-03-2018 ರೊಳಗಾಗಿ ಈ ಕಛೇರಿಗೆ ಲಿಖಿತ ರೂಪದಲ್ಲಿ ಸಲ್ಲಿಸಲು ಸೂಚಿಸಲಾಗಿರುತ್ತದೆ. ಇಲ್ಲವಾದಲ್ಲಿ ಸದರಿ ಬಿಲ್ಲು ಪ್ರಕ್ರಿಯೆ/ವಿಧಾನವನ್ನೇ ಅಂತಿಮಗೊಳಿಸಲು ಕ್ರಮ ವಹಿಸಲಾಗುವುದೆಂದು ತಿಳಿಸಲಾಗಿರುತ್ತದೆ.

ಸದರಿ ಆಹಾರ ಸರಬರಾಜುದಾರರ ಬಿಲ್ಲು ಪ್ರಕ್ರಿಯೆ/ವಿಧಾನ ಕುರಿತು ದಿನಾಂಕ: 17-03-2018ರೊಳಗಾಗಿ ಆಹಾರ ಸರಬರಾಜು ಸಂಸ್ಥೆಗಳಿಂದ ಯಾವುದೇ ಸಲಹೆ ಅಥವಾ ಮಾರ್ಪಾಡು ಕೋರಿ ಪತ್ರ ಸ್ವೀಕೃತಗೊಂಡಿರದ ಹಿನ್ನೆಲೆಯಲ್ಲಿ ಇಂದಿರಾ ಕ್ಯಾಂಟೀನ್‌ಗಳ ಆಹಾರ ಸರಬರಾಜು ಬಿಲ್ಲಿನ ಪ್ರಕ್ರಿಯೆಯನ್ನು ಅಂತಿಮಗೊಳಿಸಿ ಈ ಪತ್ರದೊಂದಿಗೆ ಲಗತ್ತಿಸಿ ಕ್ರಮವಹಿಸಲು ಕೋರಿದೆ.

ವಂದನೆಗಳೊಂದಿಗೆ,

ನಿರ್ದೇಶಕರು
ಪೌರಾಡಳಿತ ನಿರ್ದೇಶನಾಲಯ

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ: 080-22867[illegible] / 2286[illegible]
ಫ್ಯಾಕ್ಸ್: 080-22866[illegible] / 2286[illegible]
Email: dmablrdo@gmail.com
Website: www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು 560 [illegible]

ಸಂಖ್ಯೆ: 23574 ಡಿಎಂಎ 60 ಎಂಎಎಸ್‌ಸಿ 2017-18 ದಿನಾಂಕ: [illegible]-07-2019

:: ಕಛೇರಿ ಆದೇಶ ::

ವಿಷಯ: ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ನಿರ್ಮಿಸಲಾಗಿರುವ "ಇಂದಿರಾ ಕ್ಯಾಂಟೀನ್"ಗಳಿಗೆ ಭೇಟಿ ನೀಡಿ ಕಾಮಗಾರಿ ಗುಣಮಟ್ಟ ಹಾಗೂ ನಿರ್ವಹಣೆಯನ್ನು ಪರಿಶೀಲಿಸಿ ವರದಿ ಸಲ್ಲಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ: ನಅಇ 301 ಎಸ್‌ಎಫ್‌ಸಿ 2017 ದಿ:23-10-2017, 29-11-2017 ಹಾಗೂ 29-12-2017.

2) ದಿ:04-06-2019ರಂದು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಜರುಗಿದ "ಇಂದಿರಾ ಕ್ಯಾಂಟೀನ್" ಯೋಜನೆ ಪ್ರಗತಿ ಪರಿಶೀಲನಾ ಸಭೆ.

ಸರ್ಕಾರದ ಉಲ್ಲೇಖ(1)ರ ಆದೇಶದನ್ವಯ ರಾಜ್ಯದ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳ 173 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಒಟ್ಟು 248 ಇಂದಿರಾ ಕ್ಯಾಂಟೀನ್ ಹಾಗೂ 15 ಅಡುಗೆ ಕೋಣೆಗಳನ್ನು ನಿರ್ಮಿಸಲು ಆದೇಶಿಸಿರುತ್ತದೆ. ಅದರಂತೆ, ಇಂದಿರಾ ಕ್ಯಾಂಟೀನ್‌ಗಳನ್ನು ಪೂರ್ವ-ಸಿದ್ಧತಾ ಮಾದರಿಯಲ್ಲಿ ನಿರ್ಮಿಸಲು ಮೆ: ಕೆಇಎಫ್ ಇನ್ಫ್ರಾ ಸಂಸ್ಥೆ, ಕೃಷ್ಣಗಿರಿ ರವರಿಗೆ ಹಾಗೂ ಅಡುಗೆ ಸಲಕರಣೆಗಳನ್ನು ಸರಬರಾಜು ಮಾಡಲು ಮೆ: ಕುಮಾರ್ ಎಕ್ವಿಪ್‌ಮೆಂಟ್ಸ್ ಪ್ರೈ ಲಿ, ನವದೆಹಲಿ ಮತ್ತು ಮೆ: ಕಲ್ಪುರ ರೆಫ್ರಿಜರೇಷನ್ಸ್ ಪ್ರೈ ಲಿ, ಅಂಬಾಗಿಲು, ಉಡುಪಿ ರವರಿಗೆ ಕಾಮಗಾರಿ ಕಾರ್ಯಾದೇಶಗಳನ್ನು ಈ ಕಛೇರಿ ವತಿಯಿಂದ ನೀಡಲಾಗಿರುತ್ತದೆ. ಪ್ರಸ್ತುತ ರಾಜ್ಯದಲ್ಲಿ 157 ಇಂದಿರಾ ಕ್ಯಾಂಟೀನ್‌ಗಳು ಚಾಲ್ತಿಯಲ್ಲಿರುತ್ತದೆ.

ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಉಲ್ಲೇಖ(2)ರ ರೀತ್ಯಾ ಜರುಗಿದ "ಇಂದಿರಾ ಕ್ಯಾಂಟೀನ್" ಯೋಜನೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ "ಇಂದಿರಾ ಕ್ಯಾಂಟೀನ್" ಕಟ್ಟಡಗಳ ಗುಣಮಟ್ಟ, ಸಿದ್ಧಪಡಿಸಲಾಗುತ್ತಿರುವ ಆಹಾರದ ಗುಣಮಟ್ಟ, ಸ್ವಚ್ಛತೆ ಹಾಗೂ ನೀಡಲಾಗುತ್ತಿರುವ ಆಹಾರದ ಪರಿಮಾಣ ಮತ್ತು ರುಚಿ ಕುರಿತು ಚರ್ಚಿಸಲಾಗಿ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಪೌರಾಡಳಿತ ನಿರ್ದೇಶನಾಲಯದ ತಾಂತ್ರಿಕ ಶಾಖೆಯ ಅಭಿಯಂತರರು ರಾಜ್ಯದಲ್ಲಿ ಚಾಲ್ತಿಯಲ್ಲಿರುವ "ಇಂದಿರಾ ಕ್ಯಾಂಟೀನ್"ಗಳಿಗೆ ಸ್ಥಳ ಪರಿಶೀಲನೆಗೆ ಭೇಟಿ ನೀಡಿ ಈ ಮೇಲೆ ತಿಳಿಸಿದ ಅಂಶಗಳ ಕುರಿತು ಪರಿಶೀಲಿಸಿ ವರದಿ ಪಡೆಯಲು ನಿರ್ದೇಶಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ನಿರ್ದೇಶನಾಲಯದ ಈ ಕೆಳಕಂಡ ತಾಂತ್ರಿಕ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ.

ಕ್ರ.ಸಂ	ಸಿಬ್ಬಂದಿಯ ಹೆಸರು	ಪದನಾಮ	ಪರಿವೀಕ್ಷಿಸಬೇಕಾಗಿರುವ ಜಿಲ್ಲೆಗಳು
01	ಶ್ರೀ ಅರುಣ್ ಕುಮಾರ್ ಜಿ	ಸಹಾಯಕ ಅಭಿಯಂತರರು	ತುಮಕೂರು, ಶಿವಮೊಗ್ಗ, ಚಿತ್ರದುರ್ಗ, ದಾವಣಗೆರೆ, ಕೋಲಾರ
02	ಶ್ರೀ ಉಮಾ ಎಂ ಗದಗಕರ	ಕಿರಿಯ ಅಭಿಯಂತರರು	ಗದಗ, ಧಾರವಾಡ, ಹಾವೇರಿ, ಬಾಗಲಕೋಟೆ
03	ಶ್ರೀಮತಿ ಸೌಮ್ಯ ಹೆಚ್ ವಿ	ಸಹಾಯಕ ಅಭಿಯಂತರರು	ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಹಾಸನ, ಮಂಡ್ಯ
04	ಕು| ಕಾವ್ಯಶ್ರೀ ಆರ್.ಡಿ	ಸಹಾಯಕ ಅಭಿಯಂತರರು	ಕಲಬುರಗಿ, ರಾಯಚೂರು, ಬೀದರ ಯಾದಗಿರಿ
05	ಶ್ರೀ ಪವನ್ ಕುಮಾರ್	ಸಹಾಯಕ ಅಭಿಯಂತರರು	ಬೆಳಗಾವಿ, ಉತ್ತರ ಕನ್ನಡ, ವಿಜಯಪುರ, ಹಾವೇರಿ
06	ಶ್ರೀ ಗವಿ ಸಿದ್ಧಯ್ಯ	ಸಹಾಯಕ ಅಭಿಯಂತರರು	ಕೊಪ್ಪಳ, ಬಳ್ಳಾರಿ, ಬಾಗಲಕೋಟೆ.

ಕ್ರ.ಸಂ	ಸಿಬ್ಬಂದಿಯ ಹೆಸರು	ಪದನಾಮ	ಪರಿವೀಕ್ಷಿಸಬೇಕಾಗಿರುವ ಜಿಲ್ಲೆಗಳು
07	ಶ್ರೀಮತಿ ವಿನುತಾ	ಸಹಾಯಕ ಅಭಿಯಂತರರು	ಮೈಸೂರು, ಚಾಮರಾಜನಗರ, ಕೊಡಗು
08	ಶ್ರೀಮತಿ ಕೌಸಲ್ಯ	ಸಹಾಯಕ ಅಭಿಯಂತರರು	ದಕ್ಷಿಣ ಕನ್ನಡ, ಉಡುಪಿ . ಚಿಕ್ಕಮಗಳೂರು

ಕೋಷ್ಟಕದಲ್ಲಿ ತಿಳಿಯಪಡಿಸಲಾಗಿರುವ ಜಿಲ್ಲೆಗಳ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ನಿರ್ಮಿಸಲಾಗಿರುವ "ಇಂದಿರಾ ಕ್ಯಾಂಟೀನ್"ಗಳಿಗೆ ಕನಿಷ್ಠ ಮೂರು ತಿಂಗಳಿಗೊಮ್ಮೆ ಭೇಟಿ ನೀಡಿ ಈ ಕೆಳಗಿನ ಅಂಶಗಳನ್ನು ಪರಿಶೀಲಿಸಿ ವರದಿಯನ್ನು ಮುಖ್ಯ ಯೋಜನಾಧಿಕಾರಿ ರವರಿಗೆ ಸಲ್ಲಿಸಲು ನಿರ್ದೇಶಿಸಿದೆ.

- ಕ್ಯಾಂಟೀನ್ ಕಟ್ಟಡದ ಗುಣಮಟ್ಟ.
- ಆಹಾರ ಸರಬರಾಜುದಾರರು ಅಡುಗೆ ಕೋಣೆ/ಕ್ಯಾಂಟೀನ್‌ಗಳಲ್ಲಿ ಸಿದ್ಧಪಡಿಸುವ ಆಹಾರ ಪದಾರ್ಥಗಳ ಗುಣಮಟ್ಟ (ತರಕಾರಿ/ಅಕ್ಕಿ/ಗೋಧಿ ಇತ್ಯಾದಿಗಳ ಪದಾರ್ಥಗಳ ಪರಿಶೀಲನೆ).
- ಕ್ಯಾಂಟೀನ್‌ಗಳ ಶುಚಿತ್ವ, ಆಹಾರದ ರುಚಿ, ವಿತರಿಸಲಾಗುವ ಆಹಾರದ ಪ್ರಮಾಣ (ನಿಗದಿಪಡಿಸಲಾದ ಆಹಾರಗಳ ಪ್ರಮಾಣವನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ). ಕ್ಯಾಂಟೀನ್‌ಗಳಲ್ಲಿ ಅಳವಡಿಸಲಾಗಿರುವ ಉಪಕರಣಗಳ ನಿರ್ವಹಣೆ.
- ಸಂಪ್ ಹಾಗೂ ಓವರ್ ಹೆಡ್ ಟ್ಯಾಂಕ್‌ಗಳ ಸ್ವಚ್ಛತೆ ನಿರ್ವಹಣೆ, ಸಿ.ಸಿ ಟಿವಿಗಳ ಅಳವಡಿಕೆ
- ಕ್ಯಾಂಟೀನ್‌ಗಳಲ್ಲಿ ಸಿದ್ಧಪಡಿಸಲಾದ ಆಹಾರದ ಪರಿಮಾಣ ಹಾಗೂ ವಿತರಣೆಯನ್ನು ಆಯಾ ಸ್ಥಳೀಯ ಸಂಸ್ಥೆಗಳ ಪರಿಸರ ಅಭಿಯಂತರರು/ಆರೋಗ್ಯ ನಿರೀಕ್ಷಕರು ಪರಿವೀಕ್ಷಿಸುತ್ತಿರುವವರೇ ಎಂದು ಖಾತ್ರಿ ಪಡಿಸಿಕೊಳ್ಳಬೇಕು.
- ಮುನ್ಸಿಪಲ್ ನಿಧಿಯಡಿ ನೀರು ಮೃದುಗೊಳಿಸುವಿಕೆ ಯಂತ್ರ (water softener)ವನ್ನು ಅಳವಡಿಸಲಾಗಿದೆಯೇ ಎಂದು ಖಾತ್ರಿ ಪಡಿಸಿಕೊಳ್ಳಬೇಕು.
- ಮುನ್ಸಿಪಲ್ ನಿಧಿಯಡಿ ಅಡುಗೆ ಕೋಣೆ/ಕ್ಯಾಂಟೀನ್‌ಗಳಲ್ಲಿ ಬಳಸಲ್ಪಡುವ ಉಪಕರಣಗಳಿಗೆ Stabilizer ಗಳನ್ನು ಅಳವಡಿಸಲಾಗಿದೆಯೇ ಎಂದು ಖಾತ್ರಿ ಪಡಿಸಿಕೊಳ್ಳಬೇಕು.

ನಿರ್ದೇಶಕರು
ಪೌರಾಡಳಿತ ನಿರ್ದೇಶನಾಲಯ

ಪ್ರತಿಯನ್ನು :

1) ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ - ರವರ ಅವಗಾಹನೆಗಾಗಿ.
2) ಕಛೇರಿ ಪ್ರತಿ.

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದ್ಯಾಂತ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇಂದಿರಾ ಕ್ಯಾಂಟೀನ್ ತೆರೆಯುವ ಬಗ್ಗೆ

*****

ಪ್ರಸ್ತಾವನೆ:

ಆಹಾರವು ಮನುಕುಲಕ್ಕೆ ಮೂಲಭೂತ ಅವಶ್ಯಕತೆಯಾಗಿದ್ದು, ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಅಗತ್ಯ ಪ್ರಮಾಣದಲ್ಲಿ ಪೌಷ್ಠಿಕಾಂಶ ಹೊಂದಿದ ಆಹಾರ ತೆಗೆದುಕೊಳ್ಳುವುದು ಅತಿ ಅವಶ್ಯಕ. ನಗರ ಪ್ರದೇಶಗಳಲ್ಲಿ ವಾಸಿಸುವ ಬಡಜನರು ಅವರ ಸಾಮಾಜಿಕ ಆರ್ಥಿಕ ಪರಿಸ್ಥಿತಿಗಳಿಂದಾಗಿ ಸಮತೋಲಿತ ಆಹಾರದಿಂದ ವಂಚಿತರಾಗಿರುತ್ತಾರೆ. ಈ ಹಿನ್ನೆಲೆಯಲ್ಲಿ ಸರ್ಕಾರವು ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್‌ಗಳಲ್ಲಿ ಇಂದಿರಾ ಕ್ಯಾಂಟೀನ್‌ಗಳನ್ನು, ಪ್ರಾರಂಭಿಸಿ ಕೈಗೆಟುಕುವ ದರದಲ್ಲಿ ಎಂದರೆ 5 ರೂಪಾಯಿಗೆ ಬೆಳಗಿನ ಉಪಹಾರ ಮತ್ತು 10 ರೂಪಾಯಿಗೆ ಮಧ್ಯಾಹ್ನ ಮತ್ತು ಸಂಜೆಯ ಊಟಗಳನ್ನು ಒದಗಿಸಲಾಗುತ್ತಿದೆ. ಬೆಂಗಳೂರಿನಲ್ಲಿ ಸ್ಥಾಪಿಸಿದ ಇಂದಿರಾ ಕ್ಯಾಂಟೀನ್ ಯೋಜನೆ ಯಶಸ್ವಿಯಾಗಿ, ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ಪಡೆದಿರುವುದನ್ನು ಗಮನಿಸಿ, ಸರ್ಕಾರವು 2017-18ನೇ ಸಾಲಿನಲ್ಲಿ ಈ ಯೋಜನೆಯನ್ನು ರಾಜ್ಯದ ಎಲ್ಲಾ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳ ನಗರ ಸ್ಥಳೀಯ ಸಂಸ್ಥೆಗಳಿಗೆ ವಿಸ್ತರಿಸಲು ತೀರ್ಮಾನ ಕೈಗೊಂಡು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 301 ಎಸ್‌ಎಫ್‌ಸಿ 2017
ಬೆಂಗಳೂರು, ದಿನಾಂಕ: 23-10-2017.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಕೈಗೆಟುಕುವ ದರದಲ್ಲಿ ಅಂದರೆ 5 ರೂಪಾಯಿಗೆ ಬೆಳಗಿನ ಉಪಹಾರ ಮತ್ತು 10 ರೂಪಾಯಿಗೆ ಮಧ್ಯಾಹ್ನ ಮತ್ತು ಸಂಜೆಯ ಊಟಗಳನ್ನು ಒದಗಿಸಲು 173 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ **ಅನುಬಂಧ-1** ರಲ್ಲಿ ತಿಳಿಸಿರುವಂತೆ 247 **"ಇಂದಿರಾ ಕ್ಯಾಂಟೀನ್"**ಗಳನ್ನು ಹಾಗೂ 15 ಸಾಮಾನ್ಯ ಅಡುಗೆಕೋಣೆಗಳನ್ನು ಈ ಕೆಳಕಂಡ ಮಾರ್ಗಸೂಚಿಯ ಅನ್ವಯ ಪ್ರಾರಂಭಿಸಲು ಅನುಮೋದನೆ ನೀಡಿದೆ.

ಇಂದಿರಾ ಕ್ಯಾಂಟೀನ್ ಯೋಜನೆಯ ಮಾರ್ಗಸೂಚಿಗಳು

1) ನಗರ ಸ್ಥಳೀಯ ಸಂಸ್ಥೆಗಳ ಜನಸಂಖ್ಯೆಯನ್ನು ಪರಿಗಣಿಸಿ ಕ್ಯಾಂಟೀನ್‌ಗಳಲ್ಲಿ ಪ್ರತಿ ಹೊತ್ತಿಗೆ ಆಹಾರ ಒದಗಿಬೇಕಾದ ವ್ಯಕ್ತಿಗಳ ಸಂಖ್ಯೆಯನ್ನು ಕೆಳಕಂಡಂತೆ ನಿಗದಿಪಡಿಸಿದೆ.

ಕ್ರ	ಪಟ್ಟಣದ ಜನಸಂಖ್ಯೆ	ಮಿತಿಗೊಳಿಸಿದ ವ್ಯಕ್ತಿಗಳ ಸಂಖ್ಯೆ
1	25000 ದ ವರೆಗೆ	200
2	45000 ದ ವೆಗೆ	300
3	45000 ದಿಂದ 1,00,000	500
4	1,00,000 ಕ್ಕಿಂತಾ ಅಧಿಕ	ಸರಾಸರಿ 1,00,000 ಜನ ಸಂಖ್ಯೆಗೆ ಒಂದರಂತೆ ಕ್ಯಾಂಟೀನ್ ಸಂಖ್ಯೆಯನ್ನು ಹೆಚ್ಚಿಸಲಾಗುವುದು.

2) ಒಂದು ಅಥವಾ 2 ಕ್ಯಾಂಟೀನ್ ಅಗತ್ಯವಿರುವ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಡುಗೆಕೋಣೆ ಹೊಂದಿರುವ ಕ್ಯಾಂಟೀನ್‌ಗಳನ್ನು (Kitchen attached to Canteen) ನಿರ್ಮಿಸುವುದು, 2ಕ್ಕಿಂತಾ ಹೆಚ್ಚಿನ ಸಂಖ್ಯೆಯ ಕ್ಯಾಂಟೀನ್‌ಗಳನ್ನು ಹೊಂದಿರುವ ಪಟ್ಟಣಗಳಲ್ಲಿ ಕಾಂಟೀನ್ ಕಟ್ಟಡ ಮತ್ತು ಅಡುಗೆಕೋಣೆ ಕಟ್ಟಡಗಳನ್ನು ಪ್ರತ್ಯೇಕಿಸಿ, ಸಾಮಾನ್ಯ ಅಡಿಗೆಕೋಣೆಗಳನ್ನು (Common Kitchen) ನಿರ್ಮಿಸುವುದು.

3) 99 ಕ್ಯಾಂಟೀನ್ ಮತ್ತು 3 ಪ್ರತ್ಯೇಕ ಅಡುಗೆಕೋಣೆಗಳನ್ನು ಪೂರ್ವಸಿದ್ಧತಾ ಉಪಕರಣಗಳನ್ನು (Prefabricated Elements) ಬಳಸಿ ನಿರ್ಮಿಸುವುದು. ನಗರ ಸ್ಥಳೀಯ ಸಂಸ್ಥೆಗಳ ಹಾಗೂ ಕ್ಯಾಂಟೀನ್‌ಗಳ ವಿವರಗಳನ್ನು **ಅನುಬಂಧ-2** ರಲ್ಲಿ ನೀಡಿದೆ.

4) 148 ಕ್ಯಾಂಟೀನ್‌ಗಳು ಮತ್ತು 12 ಪ್ರತ್ಯೇಕ ಅಡುಗೆಕೋಣೆಗಳನ್ನು ಸಂಪ್ರದಾಯಿಕ ಕಟ್ಟಡ ನಿರ್ಮಾಣ ಪದ್ಧತಿಯನ್ನು (Conventional Method) ಅನುಸರಿಸಿ, ನಿರ್ಮಿಸುವುದು. ನಗರ ಸ್ಥಳೀಯ ಸಂಸ್ಥೆಗಳ ಹಾಗೂ ಕ್ಯಾಂಟೀನ್‌ಗಳ ವಿವರಗಳನ್ನು **ಅನುಬಂಧ-3** ರಲ್ಲಿ ನೀಡಿದೆ.

5) ಅಡುಗೆ ಉಪಕರಣ ಮತ್ತು ಪೀಠೋಪಕರಣಗಳ ಸಂಗ್ರಹಣೆಯನ್ನು ಕರ್ನಾಟಕ ಸಂಗ್ರಹಣೆಯಲ್ಲಿ ಪಾರದರ್ಶಿಕತೆ ಕಾಯ್ದೆ 1999ರ ಪ್ರಕಾರ ಟೆಂಡರ್ ಮುಖಾಂತರ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರು ನಿರ್ವಹಿಸುವುದು.

6) ಆಹಾರ ಸರಬರಾಜುದಾರ ಆಯ್ಕೆಯ ಬಗ್ಗೆ ಟೆಂಡರ್ ಪ್ರಕ್ರಿಯೆಯನ್ನು ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿಗಳು ನಿರ್ವಹಿಸುವುದು.

7) ರಾಜ್ಯದಾದ್ಯಂತ ಒಟ್ಟು 247 ಇಂದಿರಾ ಕ್ಯಾಂಟೀನ್‌ಗಳನ್ನು ಮತ್ತು 15 ಪ್ರತ್ಯೇಕ ಅಡುಗೆ ಕೋಣೆಗಳನ್ನು ಮತ್ತು ಅಗತ್ಯ ಅಡುಗೆ ಉಪಕರಣ ಮತ್ತು ಪೀಠೋಪಕರಣಗಳ ಸಂಗ್ರಹಣೆಯೊಂದಿಗೆ ತೆರೆಯಲು ಅಗತ್ಯವಿರುವ ಅನುದಾನವನ್ನು ರಾಜ್ಯ ಹಣಕಾಸು ಆಯೋಗದ ಪ್ರವೇಶ ತೆರಿಗೆ ಅವತರಣ ಮತ್ತು ಇತರೆ ಅವತರಣದ ಅನುದಾನಗಳಿಂದ ಒದಗಿಸುವುದು.

8) ಆಹಾರ ಪೂರೈಕೆಗೆ ಪ್ರತಿ ಮಾಹೆಗೆ ತಗಲುವ ಸಹಾಯ ಧನದ ಶೇ.30ರಷ್ಟನ್ನು ಕಾರ್ಮಿಕ ಇಲಾಖೆಯಿಂದ ಪಡೆಯುವುದು, ಬಾಕಿ ಶೇ 70 ರಷ್ಟು ಸಹಾಯ ಧನವನ್ನು ಮಹಾನಗರ ಪಾಲಿಕೆಗಳು ತಮ್ಮ ಸ್ವಂತ ಅನುದಾನದಿಂದ ಭರಿಸತಕ್ಕದ್ದು. ಉಳಿದ ಇತರೆ ನಗರ ಸ್ಥಳೀಯ ಸಂಸ್ಥೆಗಳಿಗೆ ಶೇ 70ರಷ್ಟು ಸಹಾಯಧನವನ್ನು ನಗರಾಭಿವೃದ್ಧಿ ಇಲಾಖೆಯಿಂದ ಒದಗಿಸಲಾಗುವುದು.

9) ವಿದ್ಯುತ್ ಕಂಪನಿಗಳಿಗೆ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇತ್ಯಾದಿ ಸಂಸ್ಥೆಗಳಿಗೆ ಪಾವತಿಸಬೇಕಾದ ಠೇವಣಿಗಳಿಗೆ ವಿನಾಯತಿ ನೀಡುವುದು.

10) ಇಂದಿರಾ ಕ್ಯಾಂಟೀನ್‌ಗಳಿಗೆ ಸಂಬಂಧಿಸಿದ ಕಟ್ಟಡಗಳನ್ನು ಕಂದಾಯ ಇಲಾಖೆ, ನಗರ ಸ್ಥಳೀಯ ಸಂಸ್ಥೆ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ವಿದ್ಯುತ್ ಕಂಪನಿಗಳು, ಪೊಲೀಸ್ ಇಲಾಖೆ ಅಥವಾ ಇತರೆ ಯಾವುದೇ ಸರ್ಕಾರಿ ಸಂಸ್ಥೆಗಳಿಗೆ ಸಂಬಂಧಿಸಿದ ಜಾಗದಲ್ಲಿ ಭೂಮಿ ವರ್ಗಾವಣೆ ಪ್ರಕ್ರಿಯೆ ಇಲ್ಲದೇ ನಿರ್ಮಿಸಲು ಅನುಮತಿಸುವುದು.

11) ಕ್ಯಾಂಟೀನ್ ಸ್ಥಾಪಿಸುವ ಸ್ಥಳವಾಗಿ ಸಾರ್ವಜನಿಕ ಪ್ರದೇಶಗಳಾದ ಸಾರ್ವಜನಿಕ ಆಸ್ಪತ್ರೆ ವಾಹನ ನಿಲ್ದಾಣ, ರೈಲ್ವೆ ನಿಲ್ದಾಣಗಳಂತಹ ಪ್ರದೇಶಗಳನ್ನು ಆಯ್ಕೆ ಮಾಡುವುದು.

12) ಪೌರಾಡಳಿತ ನಿರ್ದೇಶನಾಲಯವು ರಾಜ್ಯದ ಎಲ್ಲಾ ಇಂದಿರಾ ಕ್ಯಾಂಟೀನ್‌ಗಳ ಅನುಷ್ಠಾನಕ್ಕೆ (ಬಿಬಿಎಂಪಿ ಹೊರತುಪಡಿಸಿ) ರಾಜ್ಯಮಟ್ಟದ ನೋಡಲ್ ಸಂಸ್ಥೆಯಾಗಿದ್ದು, ಅದರ ನಿರ್ದೇಶಕರು

ಕ್ಯಾಂಟೀನ್‌ಗಳ ಅನುಷ್ಠಾನ ಕಾರ್ಯವನ್ನು ರಾಜ್ಯಮಟ್ಟದಲ್ಲಿ ಪರಿವೀಕ್ಷಣೆ ನಡೆಸುವುದರೊಂದಿಗೆ ಅಗತ್ಯವಿರುವ ವಿವರಣಾತ್ಮಕ ಮಾರ್ಗದರ್ಶಿ ಸೂಚನೆಗಳನ್ನು ನೀಡುವುದು.

13) ಮಹಾನಗರ ಪಾಲಿಕೆ ವ್ಯಾಪ್ತಿಯ ಕ್ಯಾಂಟೀನ್‌ಗಳ ಆವರ್ತಿತ ವೆಚ್ಚವನ್ನು ಸಂಬಂಧಿಸಿದ ಮಹಾನಗರ ಪಾಲಿಕೆಗಳು ತಮ್ಮ ಸ್ವಂತ ಸಂಪನ್ಮೂಲದಿಂದ ಅಥವಾ ಎಸ್.ಎಫ್.ಸಿ. ಮುಕ್ತನಿಧಿಯಿಂದ ಭರಿಸುವುದು. ಮಹಾನಗರಪಾಲಿಕೆಗಳನ್ನು ಹೊರತುಪಡಿಸಿ ಇತರೆ ಪಟ್ಟಣಗಳ ಕ್ಯಾಂಟೀನ್‌ಗಳ ಆವರ್ತಿತ ವೆಚ್ಚವನ್ನು ನಗರಾಭಿವೃದ್ಧಿ ಇಲಾಖೆಗೆ ಹಂಚಿಕೆ ಮಾಡಿದ ಎಸ್.ಎಫ್.ಸಿ. ಅನುದಾನದಲ್ಲಿ ನಿರ್ವಹಿಸುವುದು.

14) ಪ್ರತ್ಯೇಕ ಅಡುಗೆಕೋಣೆಗಳಿಂದ ವಿವಿಧ ಕ್ಯಾಂಟೀನ್‌ಗಳಿಗೆ ಆಹಾರವನ್ನು ಸಾಗಾಣಿಕೆ ಮಾಡುವ ಪ್ರಕರಣಗಳಲ್ಲಿ ಕಾರ್ಮಿಕ ಇಲಾಖೆಯಿಂದ ಅದಕ್ಕಾಗಿ ವಿಶಿಷ್ಠ ಮಾದರಿಯ ವಾಹನವನ್ನು ಒದಗಿಸಿ ಅಡುಗೆ ಕೋಣೆಯಿಂದ 10 ಕಿ.ಮೀ ವ್ಯಾಪ್ತಿಯ ಪ್ರದೇಶದಲ್ಲಿನ ಕಟ್ಟಡ ನಿರ್ಮಾಣ ಕಾರ್ಯ ಸ್ಥಾನದಲ್ಲಿ ಕೆಲಸದಲ್ಲಿ ತೊಡಗಿರುವ 50ಕ್ಕಿಂತ ಹೆಚ್ಚಿನ 250 ಗಿಂತ ಕಡಿಮೆ ಇರುವ ಕಾರ್ಮಿಕರಿಗೆ ಮಧ್ಯಾಹ್ನ 1.00 ಗಂಟೆ ನಂತರ ಆಹಾರ ತಲುಪಿಸುವ ವ್ಯವಸ್ಥೆಗಾಗಿ ಈ ವಾಹನವನ್ನು ಬಳಸಲು ಅವಕಾಶಕಲ್ಪಿಸುವುದು.

15) ಕಾರ್ಮಿಕ ಇಲಾಖೆ ವತಿಯಿಂದ ಆಹಾರ ಸಹಾಯಧನಕ್ಕಾಗಿ ಶೇ.30ರಷ್ಟು ಮೊಬಲಗನ್ನು ಲೇಬರ್ ಸೆಸ್‌ನಿಂದ ಭರಿಸುವುದು.

16) ಪ್ರತಿ ಕ್ಯಾಂಟೀನ್‌ಗಳಿಗೆ ಆಹಾರ ಬಳಸುವ ವ್ಯಕ್ತಿಗಳ ನೋಂದಣಿಗೆ ಕೌಂಟರ್ ತೆರೆಯಲು ಅವಕಾಶ.

17) ಮಂಗಳೂರು ಮಹಾನಗರಪಾಲಿಕೆಗೆ ಮಂಜೂರು ಮಾಡಿರುವ ಒಟ್ಟು 6 ಇಂದಿರಾ ಕ್ಯಾಂಟೀನ್‌ಗಳ ಪೈಕಿ ಒಂದನ್ನು ಉಳ್ಳಾಲ ನಗರಸಭೆಯಲ್ಲಿ ಪ್ರಾರಂಭಿಸುವುದು (ಅನುಬಂಧ-1ರಲ್ಲಿ ತಿಳಿಸಿರುವಂತೆ).

18) ಜೋಯಿಡಾ ತಾಲ್ಲೂಕು ಕೇಂದ್ರದಲ್ಲಿ ನಗರ ಸ್ಥಳೀಯ ಸಂಸ್ಥೆ ಇಲ್ಲದಿರುವುದರಿಂದ ಅದರ ಬದಲಿಗೆ ದಾಂಡೇಲಿ ನಗರಸಭೆ ವ್ಯಾಪ್ತಿಯಲ್ಲಿ ಒಂದು ಇಂದಿರಾ ಕ್ಯಾಂಟೀನನ್ನು ಪ್ರಾರಂಭಿಸಲು ಅನುಮೋದನೆ ನೀಡಿದೆ.

19) ಕ್ಯಾಂಟೀನ್‌ಗಳ ಅನುಷ್ಠಾನ ಮತ್ತು ನಂತರದ ಕಾರ್ಯನಿರ್ವಹಣೆ ಮತ್ತು ಮೇಲ್ವಿಚಾರಣೆ ನಡೆಸಲು ಕೆಳಕಂಡಂತೆ ಸಮಿತಿಯನ್ನು ರಚಿಸಿದೆ.

ಕ್ರ.	ಹುದ್ದೆ	ಸ್ಥಾನ
1.	ಜಿಲ್ಲಾಧಿಕಾರಿ (ಸಂಬಂಧಿಸಿದ ಜಿಲ್ಲೆ)	ಅಧ್ಯಕ್ಷರು
2.	ಜಿಲ್ಲಾ ರಕ್ಷಣಾಧಿಕಾರಿ (ಸಂಬಂಧಿಸಿದ ಜಿಲ್ಲೆ)	ಸದಸ್ಯರು
3.	ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಪೂರೈಕೆ	ಸದಸ್ಯರು
4.	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ	ಸದಸ್ಯರು
5.	ನಗರ ಸ್ಥಳೀಯ ಸಂಸ್ಥೆಯ ಆಯುಕ್ತರು/ಮುಖ್ಯಾಧಿಕಾರಿ	ಸದಸ್ಯರು
6.	ಜಿಲ್ಲಾ ಕಾರ್ಮಿಕ ಅಧಿಕಾರಿ	ಸದಸ್ಯರು
7.	ವಿಭಾಗೀಯ ನಿಯಂತ್ರಣಾಧಿಕಾರಿ, ಕೆಎಸ್‌ಆರ್‌ಟಿಸಿ (ಸಂಬಂಧಿಸಿದ ಜಿಲ್ಲೆ)	ಸದಸ್ಯರು
8.	ಸಹಾಯಕ/ಕಾರ್ಯಪಾಲಕ ಅಭಿಯಂತರು, ಜಿ.ನ.ಅ.ಘಟಕ	ಸದಸ್ಯರು
9.	ಪರಿಸರ ಅಭಿಯಂತರು/ಆರೋಗ್ಯಾಧಿಕಾರಿ, ನ.ಸ್ಥ.ಸಂಸ್ಥೆ	ಸದಸ್ಯರು
10.	ಯೋಜನಾಧಿಕಾರಿ, ಜಿಲ್ಲಾ ನಗರಾಭಿವೃದ್ಧಿ ಘಟಕ	ಸದಸ್ಯ ಕಾರ್ಯದರ್ಶಿ

ಈ ಆದೇಶವನ್ನು ದಿನಾಂಕ: 11-10-2017 ರಂದು ನಡೆದ ಸಚಿವ ಸಂಪುಟ ಸಭೆ ಸಂಖ್ಯೆ 25 ಪ್ರಕರಣ ಸಂಖ್ಯೆ ಸಿ.679/2017ರ ಕಾರ್ಯಸೂಚಿಯಲ್ಲಿನ ಕ್ರಮ ಸಂಖ್ಯೆ: 23 ರ ಮೇಲೆ ಕೈಗೊಂಡ ನಿರ್ಣಯದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

ಲಲಿತಾಬಾಯಿ .ಕೆ

(ಲಲಿತಾಬಾಯಿ .ಕೆ)
ಸರ್ಕಾರ ಅಧೀನ ಕಾರ್ಯದರ್ಶಿ(ಯೋ.ಮೇ.ಕೋ)
ನಗರಾಭಿವೃದ್ಧಿ ಇಲಾಖೆ

ಇವರಿಗೆ:

1. ಮಹಾಲೇಖಪಾಲರು (ಜಿ ಮತ್ತು ಎಸ್.ಎಸ್.ಎ.), ಕರ್ನಾಟಕ, ಬೆಂಗಳೂರು.
2. ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರು / ಕಾರ್ಯದರ್ಶಿಯವರು / ಆಪ್ತ ಕಾರ್ಯದರ್ಶಿಯವರು. ಸಂಬಂಧಿಸಿದ ಜಿಲ್ಲಾ ಉಸ್ತುವಾರಿ ಸಚಿವರು (ಜಿಲ್ಲಾಧಿಕಾರಿಗಳ ಮುಖಾಂತರ).
3. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು / ಕಾರ್ಯದರ್ಶಿಯವರು, ಮೂಲಭೂತ ಸೌಕರ್ಯ ಅಭಿವೃದ್ಧಿ ಇಲಾಖೆ / ಆರ್ಥಿಕ ಇಲಾಖೆ / ಯೋಜನಾ ಇಲಾಖೆ / ನಗರಾಭಿವೃದ್ಧಿ ಇಲಾಖೆ.
4. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
5. ಸಂಬಂಧಿಸಿದ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿನ ಮಾನ್ಯ ರಾಜ್ಯಸಭಾ / ಲೋಕ ಸಭಾ ಸದಸ್ಯರುಗಳು (ಜಿಲ್ಲಾಧಿಕಾರಿಗಳ ಮುಖಾಂತರ).
6. ಸಂಬಂಧಿಸಿದ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿನ ಮಾನ್ಯ ವಿಧಾನಸಭೆ / ವಿಧಾನ ಪರಿಷತ್ ಸದಸ್ಯರುಗಳು (ಜಿಲ್ಲಾಧಿಕಾರಿಗಳ ಮುಖಾಂತರ).
7. ಸಂಬಂಧಿಸಿದ ಮಹಾನಗರಪಾಲಿಕೆಗಳ ಮೇಯರ್ / ಉಪ ಮೇಯರ್(ಸಂಬಂಧಿಸಿದ್ದ ನಗರ ಸ್ಥಳೀಯ ಸಂಸ್ಥೆಗಳ ಆಯುಕ್ತರ ಮುಖಾಂತರ)
8. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ ಶಾಖೆ).
9. ಸರ್ಕಾರದ ಜಂಟಿ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ, ವಿಧಾನಸೌಧ.
10. ಸಂಬಂಧಪಟ್ಟ ಎಲ್ಲಾ ಜಿಲ್ಲಾಧಿಕಾರಿಗಳು (ಪೌರಾಡಳಿತ ನಿರ್ದೇಶನಾಲಯದ ಮುಖಾಂತರ).
11. ಇಂದಿರಾ ಕ್ಯಾಂಟೀನ್ ಜಿಲ್ಲಾ ಸಮಿತಿಯ ಸದಸ್ಯರುಗಳಿಗೆ (ಜಿಲ್ಲಾಧಿಕಾರಿಗಳ ಮುಖಾಂತರ).
12. ಸಂಬಂಧಪಟ್ಟ ಎಲ್ಲಾ ಮಹಾನಗರಪಾಲಿಕೆಗಳ ಆಯುಕ್ತರು (ಪೌರಾಡಳಿತ ನಿರ್ದೇಶನಾಲಯದ ಮುಖಾಂತರ)
13. ಸಂಬಂಧಪಟ್ಟ ಎಲ್ಲಾ ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿಗಳ ಪೌರಾಯುಕ್ತರು/ ಮುಖ್ಯಾಧಿಕಾರಿಗಳು(ಪೌರಾಡಳಿತ ನಿರ್ದೇಶನಾಲಯದ ಮುಖಾಂತರ)
14. ಮಾನ್ಯ ನಗರಾಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
15. ಮಾನ್ಯ ಪೌರಾಡಳಿತ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
16. ಸರ್ಕಾರದ ಕಾರ್ಯದರ್ಶಿ/ಉಪ ಕಾರ್ಯದರ್ಶಿ/ಜಂಟಿ ನಿರ್ದೇಶಕರು (ಯೋಜನೆ) ಇವರ ಆಪ್ತ ಕಾರ್ಯದರ್ಶಿ/ ಆಪ್ತ ಸಹಾಯಕ, ನಗರಾಭಿವೃದ್ಧಿ ಇಲಾಖೆ.
17. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ-3 ಮತ್ತು 9, ವಿಧಾನಸೌಧ, ಬೆಂಗಳೂರು.
18. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.